# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

### ತರಗತಿ

### IV

### ಭಾಗ - 1


ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - IV (Part I)

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಮಾಧ್ಯಮವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
## KANNADA IV - PART I

**Advisor**

| | |
|---|---|
| Shivashankara P. | Asst. Professor, GPM College, Manjeshwar. |

**Chairperson**

| | |
|---|---|
| Dr. Vedavathi S. | Asst. Professor, Government College, Kasaragod. |

**Experts**

| | |
|---|---|
| Dr. Rathnakara Mallamoole | Professor, Government College, Kasaragod |
| Dr. Balakrishna B. M. Hosangadi | Associate Professor, Government College, Kasaragod. |
| Sri. Yatheesh Kumar Rai K. | Principal (Rtd) GHSS Belluru |

**Participants**

| | |
|---|---|
| Balakrishna P. | HM (Rtd), GLPS Kunjathur. |
| Smt. Srikumary K. | HM (Rtd), AUPS Anekal. |
| Smt. Jyothi N. | HM, GLPS Kannur. |
| Smt. Seema Suvarna | HM, GBLPS Ujarulwar. |
| Sri. Shivarama A. | LPST, SSPALPS Udayagiri. |
| Sri. Anil Kumar U. | LPST, GWLPS Bela. |
| Sri. Ashok Kumar | LPST, GLPS Badaje. |

**Artists**

| | |
|---|---|
| Sri. Satheesh | Drawing Teacher, BRC Kumbla. |

**Academic Co-ordinator**

Dr. Sahaya Dhas D.
Research Officer, SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ, ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| **1.** | **ನಿಸರ್ಗದ ಒಡಲು** | **7 - 25** |
| | 1. ಈ ಬಾನು ಈ ಚುಕ್ಕಿ | |
| | 2. ಕಾಡಿನ ಕಾವಲುಗಾರರು | |
| | 3. ಗುಬ್ಬಿಯ ಅಳಲು | |
| **2.** | **ಹಸಿರು ಹೊನ್ನು** | **26 - 42** |
| | 1. ರೈತ | |
| | 2. ಕೈ ಕೆಸರಾದರೆ ಬಾಯಿ ಮೊಸರು | |
| | 3. ತಳಿಗಳ ಸರದಾರ | |
| **3.** | **ಪ್ರಕೃತಿಯ ಮುನಿಸು** | **43 - 60** |
| | 1. ಸುಂಟರಗಾಳಿ | |
| | 2. ಮಳೆ ಕಲಿಸಿದ ಪಾಠ | |
| | 3. ಬೆಟ್ಟದ ಕಟ್ಟೆ ಒಡೆದಾಗ | |
| **4.** | **ಸಂಸ್ಕೃತಿ ಸಂಪದ** | **61 - 75** |
| | 1. ಒಳಗಣ್ಣಿಗೆ ಒಲಿದ ನಾಟ್ಯ | |
| | 2. ದೂರದ ಬೆಟ್ಟದ ನೀರನು ಕಟ್ಟಿ | |
| | 3. ನೀರುಂಡೆ ಪ್ರಸಂಗ | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 1. ನಿಸರ್ಗದ ಒಡಲು

ಪ್ರಕೃತಿಯು ಸಕಲ ಜೀವಿಗಳ ಜೀವನಕ್ಕೆ ಆಧಾರವಾಗಿದೆ. ಮಾನವನ ಅನಿಯಂತ್ರಿತ ಚಟುವಟಿಕೆಗಳಿಂದಾಗಿ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಅಸಮತೋಲನ ಉಂಟಾಗುತ್ತಿದೆ. ಪರಿಸರವನ್ನು ಉಳಿಸಿ ಬೆಳೆಸಿ ಮುಂದಿನ ಜನಾಂಗಕ್ಕೆ ಹಸ್ತಾಂತರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪರಿಸರ ನಾಶದಿಂದಾಗಿ ಜೀವಜಾಲಗಳಿಗುಂಟಾಗುವ ಸಮಸ್ಯೆಗಳನ್ನು ತಿಳಿದುಕೊಂಡು ಅದಕ್ಕೆ ಬೇಕಾದ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಅಗತ್ಯವಿದೆ.

**ಚಿತ್ರಕ್ಕೆ ಬಣ್ಣ ಹಚ್ಚಿ ಶೀರ್ಷಿಕೆ ನೀಡಿರಿ**



# ಈ ಬಾನು ಈ ಚುಕ್ಕಿ

ಈ ಬಾನು ಈ ಚುಕ್ಕಿ ಈ ಹೂವು ಈ ಹಕ್ಕಿ
ತೇಲಿ ಸಾಗುವ ಮುಗಿಲು ಹರುಷವುಕ್ಕಿ
ಯಾರು ಇಟ್ಟರು ಇವನು ಹೀಗೆ ಇಲ್ಲಿ
ತಂದೆ ಮೊದಲು ತಿಳಿಯದೀ ನೀಲಿಯಲ್ಲಿ?

ಒಂದೊಂದು ಹೂವಿಗೂ ಒಂದೊಂದು ಬಣ್ಣ
ಒಂದೊಂದು ಜೀವಕೂ ಒಂದೊಂದು ಕಣ್ಣ
ಯಾವುದೋ ಬಗೆಯಲ್ಲಿ ಎಲ್ಲರಿಗೂ ಅನ್ನ
ಕೊಟ್ಟ ಕರುಣೆಯ ಮೂಲ ಮೆರೆಸಿಹುದು ತನ್ನ

ನೂರಾರು ನದಿ ನೀರಾ ಕುಡಿದು ಮೀರಿದಾ ಕಡಲು
ಭೋರೆಂದು ಸುರಿಸುರಿದು ಆರದಾ ಮುಗಿಲು
ಸೇರಿಯಾ ಕೋಟಿತಾರೆ ತುಂಬದಾ ಬಯಲು
ಯಾರದೀ ಮಾಯೆ, ಯಾವ? ಬಿಂಬದಾ ನೆರಳು

ಹೊರಗಿರುವ ಪರಿಯೆಲ್ಲ ಅಡಗಿಹುದು ಒಳಗೆ
ಹುಡುಕಿದರೆ ಕೀಲಿಕೈ ಸಿಗದೆ ಎದೆಯೊಳಗೆ ?
ತಿಳಿಯದೆಲ್ಲದರಲ್ಲಿ ಕುಳಿತಿರುವೆ ನೀನೆ
ಎನ್ನುವರು ನನಗೀಗ ಸೋಜಿಗವು ತಾನೆ !

**ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ**

ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ಕನ್ನಡದ ಪ್ರಸಿದ್ಧ ಸಾಹಿತಿ. ಇವರು ಭಾವಗೀತೆ, ವಿಮರ್ಶೆ, ಅನುವಾದ, ನವ್ಯಕವಿತೆ ಮತ್ತು ಮಕ್ಕಳ ಕವಿತೆಗಳನ್ನು ರಚಿಸಿರುವರು.



## ಚಟುವಟಿಕೆಗಳು

### ಉತ್ತರ ಬರೆಯಿರಿ

1. ಬಾನಲ್ಲಿ ತೇಲಿ ಸಾಗುವುದು ಯಾವುದು?
2. ಕಡಲು ಮೀರಿ ಶೋಭಿಸಲು ಕಾರಣವೇನು?
3. 'ಮಳೆ ಸುರಿದಷ್ಟು ಮುಗಿಯುವುದಿಲ್ಲ' ಎಂಬ ಆಶಯವನ್ನು ಸೂಚಿಸುವ ಸಾಲು ಯಾವುದು?
4. ಆಕಾಶದಲ್ಲಿ ಬಹಳಷ್ಟು ನಕ್ಷತ್ರಗಳಿವೆ ಎಂಬುದನ್ನು ಸೂಚಿಸುವ ಸಾಲು ಯಾವುದು?

### ಈ ಕೆಳಗೆ ನೀಡಿದ ಆಸ್ವಾದನಾ ಟಿಪ್ಪಣಿಯನ್ನು ಓದಿರಿ.

'ಈ ಬಾನು ಈ ಚುಕ್ಕಿ' ಎಂಬ ಪದ್ಯವನ್ನು ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರವರು ರಚಿಸಿದ್ದಾರೆ. ಈ ಪದ್ಯ ಪ್ರಾಸ ಪದಗಳಿಂದ ಕೂಡಿದೆ. ಈ ಪದ್ಯವನ್ನು ರಾಗವಾಗಿ ಹಾಡಬಹುದು. ಈ ಕವಿತೆ ಪ್ರಕೃತಿಯ ಕುರಿತಾಗಿದೆ. ಇದರಲ್ಲಿ "ನೂರಾರು ನದಿ ನೀರಾ ಕುಡಿದು ಮೀರಿದಾ ಕಡಲು ಭೋರೆಂದು ಸುರಿಸುರಿದು ಆರದಾ ಮುಗಿಲು" ಎಂಬ ಸಾಲು ಇಷ್ಟವಾಯಿತು. ಯಾಕೆಂದರೆ ಈ ಸಾಲು ನೂರಾರು ನದಿಗಳ ನೀರು ಕಡಲಿಗೆ ಸೇರುತ್ತದೆ. ನೀರು ಆವಿಯಾಗಿ ಮಳೆ ಸುರಿಯುತ್ತದೆ ಎಂಬ ಆಶಯವನ್ನು ಸೂಚಿಸುತ್ತದೆ.

## ಮೋಡದ ಹಾಡು

ಮೋಡ ನಾನು ಭೂಮಿಯೆಡೆಗೆ
ಮೆಲ್ಲನಿಳಿಯುವೆ
ಅಲ್ಲಿ ನಾನು ಕರಗಿ ಹೋಗಿ
ತಂಪನೆರೆಯುವೆ
    ಕೋಪ ತಾಪ ಗಗನದಲ್ಲಿ
    ಬಿಟ್ಟು ಬಂದಿಹೆ
    ಗಗನದಿಂದ ನನ್ನ ತುಂಬ
    ತಂಪು ತಂದಿಹೆ
ಎಂದು ಮೋಡ ಕೆಳಗೆ ಇಳಿದು
ಮಳೆಯ ಸುರಿಸಿತು
ಭೂಮಿಯಲ್ಲಿ ತುಂಬಿಹೋದ
ಧಗೆಯ ಸರಿಸಿತು

*ಮಧುರಕಾನನ ಗೋಪಾಲಕೃಷ್ಣ ಭಟ್*

- ಮೇಲಿನ ಕವಿತೆಯನ್ನು ಓದಿ ಆಸ್ವಾದನಾ ಟಿಪ್ಪಣಿ ತಯಾರಿಸಿರಿ.

## ಪದ ವಿಂಗಡಣೆ

| | | |
|---|---|---|
| ಹರುಷವುಕ್ಕಿ | - | ಹರುಷ + ಉಕ್ಕಿ |
| ನೀಲಿಯಲ್ಲಿ | - | |
| ಒಂದೊಂದು | - | |
| ಮೆರೆಸಿಹುದು | - | |
| ನೂರಾರು | - | |
| ಹೊರಗಿರುವ | - | |
| ಎದೆಯೊಳಗೆ | - | |
| ತಿಳಿಯದೆಲ್ಲದರಲ್ಲಿ | - | |

## ಕವಿತೆಯಲ್ಲಿ ಬರುವ ಪ್ರಾಸ ಪದಗಳನ್ನು ಪಟ್ಟಿ ಮಾಡಿರಿ.

- ಬಣ್ಣ - ಕಣ್ಣ
-
-
-
-
-

## ಕೆಳಗೆ ನೀಡಿರುವ ಪರ್ಯಾಯ ಪದಗಳನ್ನು ಗೆರೆ ಎಳೆದು ಜೋಡಿಸಿರಿ.

| | | |
|---|---|---|
| ಬಾನು | ಸಮುದ್ರ | ಕಾನನ |
| ಚುಕ್ಕಿ | ಆಕಾಶ | ಸಾಗರ |
| ಭೂಮಿ | ಅಡವಿ | ಗಗನ |
| ಕಡಲು | ಧರಣಿ | ನಕ್ಷತ್ರ |
| ಕಾಡು | ತಾರೆ | ಇಳೆ |

**ಈ ಕೆಳಗಿನ ಪದಗಳನ್ನು ಉಪಯೋಗಿಸಿ ಆನೆಯ ವಿವರಣೆ ಮತ್ತು ವರ್ಣನೆಯ ಪಟ್ಟಿಯನ್ನು ಪೂರ್ತಿಗೊಳಿಸಿರಿ.**

ಸೊಂಡಿಲು ಕಾಲುಗಳಿವೆ ಕಪ್ಪು ದಂತ ಬಾಲ ಕಿವಿ ಕಣ್ಣುಗಳು

| ವಿವರಣೆ | ವರ್ಣನೆ |
|---|---|
| ಆನೆಗೆ ಕಣ್ಣುಗಳಿವೆ | ಆನೆಗೆ ಚಿಕ್ಕದಾದ ಕಣ್ಣುಗಳು ಇವೆ |
| ನಾಲ್ಕು ಕಾಲುಗಳಿವೆ | ಕಂಬದಂತಹ ಕಾಲುಗಳು ಇವೆ |
| | |
| | |

**ಜೋಡಿಸಿರಿ**

| | |
|---|---|
| ಎತ್ತರವಾದ | ಹರಿಯುವ ನದಿ |
| ಬಣ್ಣಬಣ್ಣದ | ಮುಗಿಲು |
| ಜುಳುಜುಳು | ಹಕ್ಕಿಗಳು |
| ಚಿಲಿಪಿಲಿಗುಟ್ಟುವ | ಬಯಲು |
| ತೇಲಿಸಾಗುವ | ಬೆಟ್ಟ |
| ಹಚ್ಚಹಸಿರಾದ | ಹೂವುಗಳು |

**ಈ ಕೆಳಗಿನ ಪದಸೂರ್ಯವನ್ನು ಉಪಯೋಗಿಸಿ ಕಾಡನ್ನು ವರ್ಣಿಸಿ ಬರೆಯಿರಿ.**

ಜುಳುಜುಳು ಹರಿಯುವ ನದಿ

ಚಿಲಿಪಿಲಿಗುಟ್ಟುವ ಹಕ್ಕಿಗಳು — ಕಾಡು — ಎತ್ತರವಾದ ಮರಗಳು

ಹಚ್ಚಹಸಿರಾದ ಹುಲ್ಲುಗಾವಲು

# ಕಾಡಿನ ಕಾವಲುಗಾರರು

(ರಂಗದಲ್ಲಿ ಬೆಳಕು ಮೂಡಿದಾಗ ಕಾಡಿನ ಮಧ್ಯೆ ಚಿಂಪಾಂಜಿ, ಅಳಿಲು, ಮೊಲ, ಸಿಂಹ, ನರಿ ಮುಂತಾದ ಪ್ರಾಣಿಗಳು ಒಡ್ಡೋಲಗದ ರೀತಿಯಲ್ಲಿ ಕುಳಿತಿವೆ. ಹಿನ್ನೆಲೆಯಲ್ಲಿ ಮೃಗರಾಜನ ಆಗಮನದ ಬಗ್ಗೆ ಬಹುಪರಾಕು ಕೇಳಿ ಬರುತ್ತದೆ.)

ಮೊಲ : ಸದ್ದು.. ಸದ್ದು.. ಮಹಾರಾಜರು ಬರುತ್ತಿದ್ದಾರೆ. ಎಲ್ಲರೂ ಅವರವರ ಸ್ಥಳದಲ್ಲಿ ಕುಳಿತುಕೊಳ್ಳಿರಿ.

ಹಿನ್ನೆಲೆ : ರಾಜಾಧಿರಾಜ, ರಾಜ ಮಾರ್ತಾಂಡ
ಕಾನನ ಕುಲತಿಲಕ, ಕೋಟಿ ಭಾಸ್ಕರ ತೇಜ, ಸಿಂಹರಾಜ ಬಹುಪರಾಕು ಬಹುಪರಾಕು

[ಸಿಂಹರಾಜನು ಒಡ್ಡೋಲಗವನ್ನು ಪ್ರವೇಶ ಮಾಡುವನು. ಸಿಂಹಾಸನದಲ್ಲಿ ಕುಳಿತು ಕೊಳ್ಳುವ ಸಮಯದಲ್ಲಿ ಅವನು ಎಡವಿ ಬೀಳುತ್ತಾನೆ. ಎಲ್ಲರೂ ನಗುತ್ತಾರೆ. ನರಿ ಎದ್ದು ನಿಂತು ಸದ್ದು ಸದ್ದು ಎಂದು ಗದರಿಸುತ್ತಾನೆ.)



ಸಿಂಹ : ಮಂತ್ರಿಗಳೇ.. ಇವತ್ತಿನ ವಿಶೇಷ ಏನಿದೆ? ನಮ್ಮ ರಾಜ್ಯದಲ್ಲಿ ಎಲ್ಲರೂ ಕ್ಷೇಮ ತಾನೆ?

ನರಿ : ಹೌದು ಮಹಾಪ್ರಭೂ, ಎಲ್ಲರೂ ನೆಮ್ಮದಿಯಿಂದ ಇದ್ದಾರೆ. ಆದರೆ...

ಸಿಂಹ : ಏನು ಆದರೆ?

ನರಿ : ದಿನಗಳೆದಂತೆ ನಮ್ಮ ಕಾಡಿನೊಳಗೆ ಆಗಂತುಕರ ಪ್ರವೇಶ ಹೆಚ್ಚಾಗುತ್ತಿದೆ. ನಮ್ಮ ಗಡಿ ಪ್ರದೇಶದೊಳಗೆ ದಿನನಿತ್ಯವೆಂಬಂತೆ ಅಪರಿಚಿತರು ನುಸುಳುಕೋರರಾಗಿ ಬರುತ್ತಿದ್ದಾರೆ. ಅದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಮ್ಮ ಸೇನಾಧಿಪತಿಯಾದ ಚಿಂಪಾಂಜಿಯವರು ಹೇಳುತ್ತಿದ್ದಾರೆ. (ಚಿಂಪಾಂಜಿ ಹೌದೆಂದು ತಲೆಯಾಡಿಸುವುದು)

ಸಿಂಹ : ಓಹೋ. ಸರಿ, ಆಮೇಲೆ...?

ನರಿ : ಇನ್ನು... ಹಸಿರೇ ಉಸಿರೆಂದು ನಂಬಿದವರು ನಾವು ಆದರೆ ಇತ್ತೀಚೆಗೆ ಕೆಲವರು ನಮ್ಮ ಕಾಡಿಗೆ ಹೊಕ್ಕು ಮರ ಕಡಿಯುತ್ತಿದ್ದಾರೆ. ನಮ್ಮ ಪಕ್ಷಿ ಸಂಕುಲ ಸಂಕಷ್ಟದಲ್ಲಿದೆ. ಅವುಗಳಿಗೆ ಗೂಡು ಕಟ್ಟಲು ಸರಿಯಾದ ಗಟ್ಟಿ ಮರಗಳಿಲ್ಲ. ಕುಡಿಯುವ ನೀರಿನ ಕೊಳಗಳೂ ಹೂಳೆತ್ತದೆ ಕಲುಷಿತಗೊಂಡಿವೆ. ಎಲ್ಲೆಲ್ಲಿಂದಲೋ ಹರಿದುಬಂದ ಪ್ಲಾಸ್ಟಿಕ್ ಬಾಟಲಿಗಳು ಇನ್ನಿತರ ಕಸಕಡ್ಡಿಗಳು ನದಿಗಳನ್ನು ಹಾಳು ಮಾಡುತ್ತಿವೆಯಂತೆ.

ಚಿಂಪಾಂಜಿ : ಪ್ರಭು... ಆಮೇಲೆ ನಮ್ಮ ಕಾಡಿನ ಪ್ರಮುಖ ಮೀನುಗಾರ ಮುಖಂಡ ಕರಡಿ ಗುರಿಕಾರರು ತಮ್ಮ ಸಹಚರರೊಂದಿಗೆ ಬಂದಿದ್ದರು. ಈಗೀಗ ಅವರಿಗೆ ಮೀನಿಗಿಂತ ಹೆಚ್ಚಾಗಿ ಮಕ್ಕಳ ಡೈಪರ್, ಮದ್ಯದ ಬಾಟಲಿಗಳು, ಪ್ಲಾಸ್ಟಿಕ್ ಚೀಲಗಳು, ಇತ್ಯಾದಿಗಳೇ ಸಿಗುತ್ತಿವೆಯಂತೆ ಹಾಗಾಗಿ ಸ್ವಚ್ಚತಾ ಕಾರ್ಯ ಕೈಗೊಳ್ಳುವಂತೆ ತಾಕೀತು ಮಾಡಿ ಮನವಿ ನೀಡಿದ್ದಾರೆ.

ಸಿಂಹ : ಹೂಂ... ನಮ್ಮ ಸ್ವಚ್ಛತಾ ಆಂದೋಲನದ ಉಸ್ತುವಾರಿ ಇರುವ ಕಾಗೆ ಕಂಪೆನಿಯವರು ಏನು ಮಾಡುತ್ತಿದ್ದಾರೆ?

ನರಿ : ಅವರೂ ಮನುಷ್ಯರನ್ನೇ ಬೈಯುತ್ತಿದ್ದರು. ಅವರು ಕ್ಲೀನ್ ಮಾಡುವುದು, ಮನುಷ್ಯರು ಗಲೀಜು ಮಾಡುವುದು. ಅವರಿಗೂ ಸುಸ್ತಾಗಿದೆಯಂತೆ. ಆಮೇಲೆ ನಮ್ಮ ಕಾಡಿನ ತಹಶೀಲ್ದಾರರಾದ ಆಮೆ ಸಾಹೇಬರು ನಿನ್ನೆ ಬಂದಿದ್ರು. ಅವರೊಂದು ಬಹಳ ಖೇದಕರ ವಿಷಯ ಹೇಳಿದರು.

ಸಿಂಹ : ಏನಂತೆ?

ನರಿ : ಅರಣ್ಯಾಧಿಕಾರಿಗಳ ಸಮವಸ್ತ್ರ ಧರಿಸಿಕೊಂಡು ಕೆಲ ವ್ಯಕ್ತಿಗಳು ಮೊನ್ನೆ ರಾತ್ರಿ ಮೂರು ಜಿಂಕೆಗಳನ್ನು ಬೇಟೆಯಾಡಿದ್ದಾರಂತೆ. ಅದೂ ಕೂಡ ನಾಡಕೋವಿಗಳನ್ನು ಬಳಕೆ ಮಾಡಿದ್ದಾರಂತೆ. ನಮ್ಮ ತೋಳ ಪೋಲೀಸರು ಅವರನ್ನು ಬೆನ್ನಟ್ಟಿ ಬಳಲಿ ವಾಪಾಸಾದರಂತೆ ಅವರು ಯಾರೆಂದು ಗೊತ್ತಾಗಲಿಲ್ಲ.

ಸಿಂಹ : ಇವೆಲ್ಲ ಗಂಭೀರ ಸಮಸ್ಯೆಗಳೇ ಸರಿ. ಆದರೆ. ಇದಕ್ಕೇನು ಮಾಡೋಣ?

ನರಿ : ಇವುಗಳೆಲ್ಲಾ ನಾಡಿನಲ್ಲಿರುವ ಮನುಷ್ಯರ ದುರ್ವರ್ತನೆಯಿಂದ ಉಂಟಾದದ್ದು. ಅದಕ್ಕಾಗಿ ನಾವು ಅವರ ಮಂತ್ರಿಗಳನ್ನು ಭೇಟಿಯಾಗಿ ಅವರಿಗೆ ಮನವರಿಕೆ ಮಾಡಿಕೊಡಬೇಕು.

ಸಿಂಹ : ಅಯ್ಯೋ... ಮನುಷ್ಯರು! ಅವರ ಬಳಿಗೆ ಯಾರು ಹೋಗುವುದು? ಹಾಂ? ಯಾರಲ್ಲಿ ? ದೂತರನ್ನು? ಬರಲು ಹೇಳಿ.

(ಅಲ್ಲಿಗೆ ಎರಡು ಅಳಿಲುಗಳ ಪ್ರವೇಶ. ಅವುಗಳು ದೂತರ ಹಾಗೆ ವೇಷಭೂಷಣ ತೊಟ್ಟಿರುತ್ತವೆ.)



ಕಾಳಪ್ಪ : ಅಯ್ಯಾ... ಅಡ್ಡ ಬಿದ್ದೆವು. ನಾನು ಕಾಳಪ್ಪ.

ಸಿಂಹ : ಸರಿ. ಈಗ ನೀವು ಬಂದ ಉದ್ದೇಶ ಏನು?

ಬೋಳಪ್ಪ : ಒಡೆಯಾ, ನಮ್ಮ ಕಾಡಿನಲ್ಲಿ ನಾವು ಗಸ್ತು ತಿರುಗುತ್ತಿದ್ದಾಗ ಕೆಲವು ಮನುಷ್ಯರನ್ನು ನೋಡಿದೆವು.

ಸಿಂಹ : ಹೋ... ಹೌದಾ.. ಈಗ ಏನು ಮಾಡೋಣ? (ಮುಂದೆ ಬಂದು ಸಿಂಹಾಸನಕ್ಕೆ ಒರಗಿ ನಿಲ್ಲುವನು.)

ಚಿಂಪಾಂಜಿ : ಪ್ರಭು, ಅವರು ನಮ್ಮನ್ನು ಬಂಧಿಸಿ ಅವರ ಮೃಗಾಲಯಗಳಿಗೆ ಹಾಕಿದರೆ ನಮ್ಮ ಗತಿ ಏನು?

ಸಿಂಹ : ಹೌದು... ಹೌದು... ಅಲ್ಲಿ ಚಾಟಿಯಲ್ಲಿ ಹೊಡೆಯುತ್ತಾರಂತೆ.

ಚಿಂಪಾಂಜಿ : (ಎದೆ ಬಡಿದುಕೊಂಡು) ನಾವು ಈಗ ಹೋರಾಡಬೇಕಾದ ಸಮಯ. ನಮ್ಮ ಸೈನ್ಯಕ್ಕೆ ನೀವು ಆದೇಶ ನೀಡಿದರೆ ಆಗಲೇ ಯುದ್ಧಕ್ಕೆ ಹೊರಡುತ್ತೇವೆ.

ಸಿಂಹ : ಮಂತ್ರಿಗಳೇ.... ನೀವು ಏನು ಹೇಳುತ್ತೀರಿ?

ನರಿ : ನಾವೊಂದು ಮರದ ಪಂಜರ ತಯಾರಿಸಿ ಅವರನ್ನು ಅದರೊಳಗೆ ಹೋಗುವಂತೆ ಮಾಡಬೇಕು. ನಂತರ ಅವರನ್ನು ಬಂಧಿಸಿ ಅವರ ನಿಜವಾದ ಉದ್ದೇಶವನ್ನು ತಿಳಿಯಬೇಕು. ಬಳಿಕ ನಮ್ಮ ಕಾನೂನು ಪ್ರಕಾರ ಅವರನ್ನು ಶಿಕ್ಷಿಸಬೇಕು.

ನರಿ : ನೋಡೋಣ. ಹಾಗಾದಲ್ಲಿ ಅವರನ್ನು ಬಂಧಿಸಿ ಒತ್ತೆಯಾಳಾಗಿಸುವ, ಅವರ ಮೂಲಕ ಮನುಷ್ಯ ಕುಲದವರೊಂದಿಗೆ ಸೌಹಾರ್ದ ಒಪ್ಪಂದ ಮಾಡಿಕೊಳ್ಳೋಣ. ನಮ್ಮ ಮನವಿ ಪುರಸ್ಕರಿಸಲು ಒತ್ತಾಯಿಸೋಣ.

ಸಿಂಹ : ಹಾಗಿದ್ದರೆ ಹೊರಡಿ. ಇನ್ನು ತಡ ಮಾಡುವುದು ಬೇಡ. ಆದಷ್ಟು ಬೇಗ ಪಂಜರ ತಯಾರಿಸಿರಿ. ಕಾಳಪ್ಪ, ಬೋಳಪ್ಪ ನೀವಿಬ್ಬರೂ ಅವರ ಮೇಲೆ ಒಂದು ಕಣ್ಣಿಟ್ಟಿರಿ. ಈಗಲೇ ಹೋಗಿ.

ಕಾಳಪ್ಪ : ಸರಿ ಒಡೆಯ. (ತನ್ನ ಬಳಿ ಇದ್ದ ಸಣ್ಣ ತಮಟೆ ಹೊಡೆಯುತ್ತಾ) ಕೇಳ್ರಪ್ಪೋ ಕೇಳ್ರಿ... ಕೇಳ್ರಪ್ಪೋ ಕೇಳ್ರಿ... (ನಿರ್ಗಮಿಸುವನು)

ನರಿ : ಪ್ರಭು. ನಾವು ದಕ್ಷಿಣದ ಕೆರೆಯ ಬಳಿಯಿಂದ ಅವರನ್ನು ಹೆದರಿಸಿ ಹೆದರಿಸಿ ಉತ್ತರದತ್ತ ಬರುವಂತೆ ಮಾಡುತ್ತೇವೆ. ನೀವು ಉತ್ತರದಿಂದ ಬನ್ನಿ. ಅಲ್ಲಿ ಇಬ್ಬರನ್ನೂ ಕೂಡಿ ಹಾಕುವ.



| | | |
|---|---|---|
| ಸಿಂಹ | : | ಆಹಾ... ಒಳ್ಳೆಯ ಉಪಾಯ. ಹಾಗಾದರೆ ಹೊರಡೋಣ. ಮನುಷ್ಯರು ಮಾಡುವ ಅನ್ಯಾಯಕ್ಕೆ ಕೊನೆ ಹಾಡೋಣ. (ಎಲ್ಲರೂ ಹೋಗುವರು... ಬೆಳಕು ಮಂದವಾಗುತ್ತದೆ.) |

***ಶಶಿರಾಜ್ ರಾವ್ ಕಾವೂರು***

ಹೆಸರಾಂತ ಯುವ ನಾಟಕಕಾರ ಶಶಿರಾಜ್ ರಾವ್ ಕಾವೂರು ಇವರ 'ಮಿನುಗಲೆ ಮಿನುಗಲೆ ನಕ್ಷತ್ರ' ಎಂಬ ಪುಸ್ತಕದಿಂದ ಈ ಪಾಠಭಾಗವನ್ನು ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ಉತ್ತರ ಬರೆಯುವ

1. ಈ ನಾಟಕದಲ್ಲಿ ಬರುವ ಕಥಾಪಾತ್ರಗಳು ಯಾವುವು?
2. ಕಾಡಿಗೆ ಪ್ರವೇಶಿಸಿದವರು ಯಾರು?
3. ಮೀನುಗಾರರ ಮುಖಂಡ ನೀಡಿದ ಮನವಿಯೇನು?
4. ಆಮೆ ಹೇಳಿದ ಖೇದಕರ ವಿಷಯವೇನು?
5. ಮನುಷ್ಯರನ್ನು ಹಿಡಿಯಲು ನರಿ ಮಾಡಿದ ಉಪಾಯವೇನು?

### ಜೋಡಿಸಿ ಬರೆಯಿರಿ

| | | | |
|---|---|---|---|
| ಕಾಡಿನ | + | ಒಳಗೆ | = |
| ಹೆಚ್ಚು | + | ಆಗುತ್ತಿದೆ | = |
| ಉಂಟು | + | ಆದದ್ದು | = |
| ಅದರ | + | ಒಳಗೆ | = |
| ಅರಣ್ಯ | + | ಅಧಿಕಾರಿ | = |
| ಉಸಿರು | + | ಎಂದು | = |

### ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?

1. “ಮಂತ್ರಿಗಳೇ... ಇವತ್ತಿನ ವಿಶೇಷ ಏನಿದೆ? ನಮ್ಮ ರಾಜ್ಯದಲ್ಲಿ ಎಲ್ಲರೂ ಕ್ಷೇಮ ತಾನೆ?”
2. “ಅಯ್ಯೋ... ಅಡ್ಡ ಬಿದ್ದೆವು...”
3. ಪ್ರಭು, ಅವರು ನಮ್ಮನ್ನು ಬಂಧಿಸಿ ಅವರ ಮೃಗಾಲಯಗಳಿಗೆ ಹಾಕಿದರೆ ನಮ್ಮ ಗತಿ ಏನು?
4. “ಕಾಳಪ್ಪ, ಬೋಳಪ್ಪ ನೀವಿಬ್ಬರೂ ಅವರ ಮೇಲೆ ಒಂದು ಕಣ್ಣಿಟ್ಟಿರಿ.”

### ಅನ್ಯದೇಶೀಯ ಪದಗಳನ್ನು ಹುಡುಕಿ ಬರೆಯಿರಿ.

- ಪ್ಲಾಸ್ಟಿಕ್ ಬಾಟಲಿ
-
-

**ಕೆಳಗೆ ನೀಡಿರುವ ಮನವಿ ಪತ್ರವನ್ನು ಓದಿರಿ.**

ಇವರಿಂದ,

ಮಂಜುಳ ಪಿ.
IV ನೇ ತರಗತಿ
ಜಿ.ಎಲ್.ಪಿ.ಎಸ್. ಕಾಡೂರು
ಅಂಚೆ ಕಾಡೂರು.

ಇವರಿಗೆ,

ಅಧ್ಯಕ್ಷರು,
ಸಂಡೂರು ಗ್ರಾಮಪಂಚಾಯತು.

ಮಾನ್ಯರೇ,

ವಿಷಯ : ಸಾರ್ವಜನಿಕ ಕೊಳ ಶುಚೀಕರಣದ ಬಗ್ಗೆ -

ನಾನು ಶಾಲೆಗೆ ಹೋಗುವ ದಾರಿಯ ಸಮೀಪದಲ್ಲಿ ಒಂದು ಸಾರ್ವಜನಿಕ ಕೊಳವಿದೆ. ಇತ್ತೀಚೆಗಿನ ಕೆಲವು ದಿನಗಳಿಂದ ಈ ಕೊಳದಲ್ಲಿ ಮಾಲಿನ್ಯ ತುಂಬಿ ಪರಿಸರದಲ್ಲಿ ದುರ್ವಾಸನೆ ಬೀರುತ್ತಿದೆ. ಈ ಕೊಳವನ್ನು ಶುಚಿಗೊಳಿಸಿ ಮೊದಲಿನ ಸ್ಥಿತಿಗೆ ತರಲು ಬೇಕಾದ ಕಾರ್ಯಗಳನ್ನು ಆದಷ್ಟು ಬೇಗನೆ ಮಾಡಬೇಕಾಗಿ ಈ ಪತ್ರದ ಮೂಲಕ ವಿನಂತಿಸುತ್ತಿದ್ದೇನೆ.

ಇತಿ,

ಸ್ಥಳ : ಕಾಡೂರು
ದಿನಾಂಕ : 10.06.2025

ಸಹಿ
ಮಂಜುಳ ಪಿ.

- ಶಾಲಾ ಪರಿಸರದಲ್ಲಿರುವ ಮಾಲಿನ್ಯ ಸಂಗ್ರಹಣಾ ಘಟಕದಲ್ಲಿ ತ್ಯಾಜ್ಯವನ್ನು ಅಸಮರ್ಪಕವಾಗಿ ಸಂಗ್ರಹಿಸಿಡಲಾಗಿದೆ. ಇದು ಪರಿಸರದಲ್ಲಿ ವಿವಿಧ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡಲು ಸಾಧ್ಯವಿದೆ. ಈ ಸಮಸ್ಯೆಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಪಂಚಾಯತು ಅಧ್ಯಕ್ಷರಿಗೆ ಒಂದು ಮನವಿ ಪತ್ರ ಬರೆಯಿರಿ.

## ಮುಖವಾಡ ತಯಾರಿಸಿರಿ

ವೃತ್ತಿ ಪರಿಚಯ ತರಗತಿಯಲ್ಲಿ ಈ ನಾಟಕದಲ್ಲಿ ಬರುವ ವಿವಿಧ ಕಥಾಪಾತ್ರಗಳ ಮುಖವಾಡಗಳನ್ನು ತಯಾರಿಸಿರಿ.

## ಅಭಿನಯಿಸಿರಿ

ಈ ನಾಟಕದಲ್ಲಿ ಬರುವ ಕಥಾಪಾತ್ರಗಳನ್ನು ಹಂಚಿಕೊಂಡು ತರಗತಿಯಲ್ಲಿ ಅಭಿನಯಿಸಿರಿ.

## ನಾನು ಯಾರು?

ಕೆಳಗೆ ಕೊಟ್ಟಿರುವ ಒಗಟುಗಳಿಗೆ ಉತ್ತರ ಬರೆಯಿರಿ.

1. ಮಾವಿನ ಮರದ ಚಿಗುರೆಲೆ ನಡುವೆ ಕುಹೂ ಕುಹೂ ಕೂಗುವೆನು,
   ನಾನಾರೆಂದು ಹೇಳುವೆಯಾ? [ ]
2. ಪೊದೆಗಳ ಎಡೆಯಲಿ ಅಡಗುವೆನು, ಜಿಗಿಯುತ ಜಿಗಿಯುತ ಸಾಗುವೆನು,
   ನಾನಾರೆಂದು ಹೇಳುವೆಯಾ? [ ]
3. ಸರಸರ ಹರಿದಾಡುವೆನು, ಕಪ್ಪೆ, ಇಲಿಯನು ತಿನ್ನುವೆನು,
   ನಾನಾರೆಂದು ಹೇಳುವೆಯಾ? [ ]

- ಕೋಣೆಯಲ್ಲಿ ನೀಡಿರುವ ಉತ್ತರಕ್ಕೆ ಒಗಟು ರಚಿಸಿರಿ.

..........................................................

.......................................................... [ ಕಾಗೆ ]

..........................................................

.......................................................... [ ನವಿಲು ]

# ಗುಬ್ಬಿಯ ಅಳಲು

ಕಿಟ್ಟು ಒಂದು ದಿನ ಅಜ್ಜನಲ್ಲಿ ಕೇಳಿದನು. "ಅಜ್ಜಾ.... ಗುಬ್ಬಿ ಹಕ್ಕಿಗಳು ಈಗ ಎಲ್ಲಿಯೂ ಕಾಣಿಸುವುದಿಲ್ಲವಲ್ಲ. ಅವುಗಳು ಎಲ್ಲಿ ಹೋದುವು? ಏನಾದುವು?" ಕಿಟ್ಟುವಿನ ಅಜ್ಜ ಹೊಲಕ್ಕೆ ಹೋಗುವ ಅವಸರದಲ್ಲಿದ್ದರು. "ಗುಡ್ಡೆಯ ಮೇಲೆ ಹೋಗಿ ಗುಬ್ಬಿಗಳನ್ನೇ ಕೇಳು ಅವುಗಳು ಹೇಳುತ್ತವೆ" ಎಂದರು.

ಕಿಟ್ಟು ಮರುದಿನ ಮುಂಜಾನೆ ಊರ ಮುಂದಿನ ಗುಡ್ಡೆಗೆ ಹೋದನು. ಎಲ್ಲಿ ನೋಡಿದರೂ ಅಲ್ಲಿ ಒಂದೇ ಒಂದು ಮರವೂ ಕಾಣಿಸಲಿಲ್ಲ. "ಇಲ್ಲಿ ಗುಬ್ಬಿಗಳನ್ನು ಎಲ್ಲಿ ಹುಡುಕಲಿ?" ಎನ್ನುತ್ತಾ ಗುಡ್ಡೆ ಏರಲು ತೊಡಗಿದನು. ಆಗ ಬಿದಿರ ಮೆಳೆಯ ಮೇಲೆ ಗುಬ್ಬಿ ಹಕ್ಕಿಯೊಂದು ಕುಳಿತಿರುವುದನ್ನು ಕಂಡನು. ಅವನಿಗೆ ಬಹಳ ಸಂತೋಷವಾಯಿತು. ಅದನ್ನು ದಿಟ್ಟಿಸಿ ನೋಡಿದನು. ಹಕ್ಕಿಯ ಕತ್ತಿನ ಸುತ್ತಲೂ ಕಪ್ಪು ಬಣ್ಣವಿದೆ. "ಹೌದು, ಇದು ಗುಬ್ಬಿ ಹಕ್ಕಿಯೇ ಸರಿ".



ಅದು ಕಿಟ್ಟುವನ್ನು ಕಂಡು ಹೆದರಿ ಹಾರುವುದಕ್ಕಾಗಿ ರೆಕ್ಕೆ ಬಿಚ್ಚತೊಡಗಿತು. ಆಗ ಕಿಟ್ಟುವು "ಗುಬ್ಬೀ ... ಗುಬ್ಬೀ ...... ನಿಲ್ಲು........... ನಿಲ್ಲು. ಹಾರಬೇಡ. ನಿನ್ನಲ್ಲಿ ಮಾತನಾಡುವುದಕ್ಕಾಗಿಯೇ ಬಂದಿದ್ದೇನೆ" ಎಂದನು. ಗುಬ್ಬಿಯು ಆಶ್ಚರ್ಯದಿಂದ ಕಿಟ್ಟುವನ್ನೇ ನೋಡಿತು. "ಇಲ್ಲಿ ನೀನೊಬ್ಬನೇ ಯಾಕೆ ಕುಳಿತುಕೊಂಡಿರುವೇ? ಕಿಟ್ಟು ಕೇಳಿದನು. ಗೂಡಿನಲ್ಲಿರುವ ಮರಿಗಳಿಗೆ ತಾಯಿಯು ಗುಟುಕು ಕೊಡುತ್ತಿದ್ದಾಳೆ. ಅದಕ್ಕೆ ನಾನು ಕಾವಲು ಕಾಯುತ್ತಿದ್ದೇನೆ" ಎಂದು ಹಕ್ಕಿ ಹೇಳಿತು.



"ಈಗ ನಿಮ್ಮನ್ನು ನಮ್ಮ ಊರಿನೊಳಗೆ ಎಲ್ಲಿಯೂ ಕಾಣಿಸುವುದಿಲ್ಲವಲ್ಲ ಯಾಕೆ?" ಎಂದು ಕಿಟ್ಟು ಕೇಳಿದನು.

"ಹೌದು, ನಾವೀಗ ಊರನ್ನು ಬಿಟ್ಟಿದ್ದೇವೆ. ಅಲ್ಲಿ ಈಗ ಗೂಡು ಕಟ್ಟುವುದಕ್ಕೆ ಸ್ಥಳವೇ ಇಲ್ಲ. ಎಲ್ಲಾ ಕಡೆಗಳಲ್ಲಿಯೂ ಕಾಂಕ್ರೀಟು ಕಟ್ಟಡಗಳು ತುಂಬಿಕೊಂಡಿವೆ. ಕಷ್ಟಪಟ್ಟು ಎಲ್ಲಿಯಾದರೂ ಗೂಡು ಕಟ್ಟಿದರೆ, ಮನೆ ಗಲೀಜಾಗುತ್ತದೆ ಎಂದು ಗೂಡು ಸಮೇತ ನಮ್ಮನ್ನು ಎತ್ತಿ ಎಸೆದು ಬಿಡುತ್ತಾರೆ" ಎಂದಿತು ಗುಬ್ಬಿ. "ಇಷ್ಟಕ್ಕಾಗಿ ನೀವು ಊರು ಬಿಡುವುದೇ?" ಕಿಟ್ಟು ಪ್ರಶ್ನಿಸಿದ.

"ಇಷ್ಟೇ ಅಲ್ಲ, ನಮಗೆ ಕುಡಿಯುವುದಕ್ಕೆ ನೀರು ಸಿಗದಂತಾಯಿತು. ಮೊದಲೆಲ್ಲಾ ಕೆಲವು ಮನೆಗಳಲ್ಲಿ ನಮಗಾಗಿ ನೀರು ತುಂಬಿದ ಪ್ರತ್ಯೇಕ ಪಾತ್ರೆಗಳನ್ನು ಇಡುತ್ತಿದ್ದರು. ಈಗ ಅದೂ ಇಲ್ಲವಾಯಿತು. ಮಲಿನಗೊಂಡ ತೋಡು ಕೆರೆಗಳ ನೀರನ್ನು ಕುಡಿದು ನಮ್ಮವರಲ್ಲಿ ಹಲವಾರು ಹಕ್ಕಿಗಳು ಸತ್ತುಹೋದುವು" ಎಂದು ಗುಬ್ಬಿ ಮುಂದುವರಿಸಿತು.



"ಬಚ್ಚಲು ಮನೆಯ ನೀರನ್ನಾದರೂ ಕುಡಿದು ಬದುಕುವ ಎಂದರೆ ಕೊಳವೆಗಳ ವ್ಯವಸ್ಥೆಯಿಂದಾಗಿ ಆ ನೀರೂ ಸಿಗದಂತಾಯಿತು. ಮೊದಲು ಅಮ್ಮ-ಅಜ್ಜಿಯಂದಿರು ಅಂಗಳದಲ್ಲಿ ಎಳೆಬಿಸಿಲಿಗೆ ಮೈಯೊಡ್ಡಿ ಆಹಾರವನ್ನು ಸೇವಿಸುತ್ತಿದ್ದರು. ಆಗ ಅದರಿಂದ ಒಂದು ಪಾಲು ನಮಗೂ ಸಿಗುತ್ತಿತ್ತು. ಈಗ ಹೊರಗೆ

ಕೂತು ಉಣ್ಣುವ ಅಭ್ಯಾಸವೇ ಇಲ್ಲ. ಅಲ್ಲಲ್ಲಿ ಉಳಿದಿರುವ ಹೊಲಗಳಲ್ಲಿ ಬೆಳೆದ ಕಾಳುಗಳನ್ನು ತಿಂದಾದರೂ ಊರಿನಲ್ಲೇ ಇರುವ ಎಂದರೆ, ಕೀಟನಾಶಕಗಳನ್ನು ಸಿಂಪಡಿಸಿದ ಭತ್ತದ ಕಾಳುಗಳನ್ನು ತಿಂದು ನಮ್ಮ ಸಂತತಿಗಳೇ ನಾಶವಾದುವು. ಇನ್ನು ಈ ಊರಿನಲ್ಲಿದ್ರೆ ನಮಗೆ ಉಳಿಗಾಲವಿಲ್ಲ ಎಂದು ತಿಳಿದು ನಾವು ಅಳಿದುಳಿದ ಗುಬ್ಬಿಗಳೆಲ್ಲಾ ಸೇರಿ ಈ ಗುಡ್ಡೆಗೆ ಬಂದೆವು. ಇಲ್ಲಿಯೂ ನಮಗೆ ಸಮಾಧಾನವಿಲ್ಲ. ಹಾವು, ಹದ್ದು, ಗಿಡುಗ ಮೊದಲಾದ ಶತ್ರುಗಳು ಆಕ್ರಮಣಕ್ಕಾಗಿ ಹೊಂಚು ಹಾಕುತ್ತಾ ಇರುತ್ತವೆ'' ಎಂದು ಗುಬ್ಬಿಯು ತನ್ನ ಅಳಲನ್ನು ಹೇಳುವಾಗ ಅದರ ಗಂಟಲು ಕಟ್ಟಿತು. ಕಣ್ಣುಗಳಿಂದ ಕಂಬನಿ ತೊಟ್ಟಿಕ್ಕಿತು. ಅಷ್ಟರಲ್ಲಿ ಗಿಡುಗವೊಂದು ಹಾರಿ ಬರುವುದನ್ನು ಕಂಡು ಗುಬ್ಬಿಯು ಪುರ್ರನೆ ಹಾರಿ ತಪ್ಪಿಸಿಕೊಂಡಿತು. ಕಿಟ್ಟು ನಿಟ್ಟುಸಿರು ಬಿಟ್ಟು ಮನೆಯ ದಾರಿ ಹಿಡಿದನು.

ಆಧಾರ : ***ಚಂದ್ರಶೇಖರ ಶಿ. ಹಿರೇಮಠ*- (ಇವರ ಸಣ್ಣಕಥೆ)**

## ಚಟುವಟಿಕೆಗಳು

### ಪ್ರಶ್ನೆ ತಯಾರಿಸುವ

'ಗುಬ್ಬಿಯ ಅಳಲು' ಪಾಠಭಾಗದಿಂದ ಸಾಧ್ಯವಿದ್ದಷ್ಟು ಪ್ರಶ್ನೆಗಳನ್ನು ತಯಾರಿಸಿರಿ.

### ಪಾಠಭಾಗದಿಂದ ಕೊಟ್ಟಿರುವ ವಾಕ್ಯಗಳನ್ನು ಕ್ರಮೀಕರಿಸಿ ಬರೆಯಿರಿ

- ಇಷ್ಟು ಹೇಳುವಾಗಲೇ ಅದರ ಗಂಟಲು ಕಟ್ಟಿತು. ಕಣ್ಣುಗಳಿಂದ ಕಂಬನಿ ತೊಟ್ಟಿಕ್ಕಿತು.
- ಕಿಟ್ಟು ಮರುದಿನ ಊರ ಮುಂದಿನ ಗುಡ್ಡೆಗೆ ಹೋದನು.
- ಮೊದಲು ಅಮ್ಮ-ಅಜ್ಜಿಯಂದಿರು ಅಂಗಳದಲ್ಲಿ ಎಳೆ ಬಿಸಿಲಿಗೆ ಮೈಯೊಡ್ಡಿ ಆಹಾರವನ್ನು ಸೇವಿಸುತ್ತಿದ್ದರು. ಆಗ ಅದರಿಂದ ಒಂದು ಪಾಲು ನಮಗೂ ಸಿಗುತ್ತಿತ್ತು.
- ಗುಬ್ಬೀ... ನಿಲ್ಲು .... ನಿಲ್ಲು .... ಹಾರಬೇಡ. ನಿನ್ನಲ್ಲಿ ಮಾತಾಡುವುದಕ್ಕಾಗಿಯೇ ಬಂದಿದ್ದೇನೆ.
- ಇಲ್ಲಿಯೂ ನಮಗೆ ಸಮಾಧಾನವಿಲ್ಲ. ಹಾವು, ಹದ್ದು, ಗಿಡುಗ ಮೊದಲಾದ ಶತ್ರುಗಳು ಆಕ್ರಮಣಕ್ಕಾಗಿ ಹೊಂಚು ಹಾಕುತ್ತಾ ಇರುತ್ತವೆ.

## ಸಂಭಾಷಣೆ ಬರೆಯುವ

'ಗುಬ್ಬಿಯ ಅಳಲು' ಕಥೆಯಲ್ಲಿ ಗುಬ್ಬಿ ಮತ್ತು ಪುಟ್ಟನ ನಡುವೆ ಬರುವ ಮಾತುಗಳನ್ನು ಸಂಭಾಷಣೆ ರೂಪದಲ್ಲಿ ಬರೆಯಿರಿ.

## ವಾಕ್ಯ ರಚಿಸುವ

ಕೆಳಗಿನ ಪದಗಳನ್ನು ಉಪಯೋಗಿಸಿ ವಾಕ್ಯ ರಚಿಸಿರಿ.

- ಗಲೀಜು
- ದಿಟ್ಟಿಸು
- ಸಿಂಪಡಿಸು

## ಘೋಷಣಾ ವಾಕ್ಯಗಳು

ಕಾಡಿನ ಸಂರಕ್ಷಣೆಯ ಸಂದೇಶವನ್ನು ಸಾರುವ ಘೋಷಣಾ ವಾಕ್ಯಗಳನ್ನು ಬರೆಯಿರಿ

- ಹಸಿರಾದ ಭೂಮಿ ಹಸನಾದ ಬಾಳು
- 
- 

- ಭತ್ತದ ತೆನೆಗಳು ತಲೆದೂಗಿ ನಿಂತಿರುವ ಬಯಲನ್ನು ನೋಡಿದಾಗ ಪಾರಿವಾಳದ ಮನಸಿನಲ್ಲಿ ಯಾವ ಯಾವ ಆಲೋಚನೆಗಳು ಮೂಡಿರಬಹುದು?

## ಪದಬಂಧವನ್ನು ಪೂರ್ತಿಗೊಳಿಸಿರಿ

| | | |
|---|---|---|
| 3 ಮೊ | ◯ | ಳೆ |
| 5 ಹಂ | ◯ | |
| 4 | ◯ | ಡಿ |
| | 1 ◯ | ಕ್ಷಿ |
| | 6 ◯ | ರಿ |
| 2 ಕ | ◯ | |

**ಎಡದಿಂದ ಬಲಕ್ಕೆ**

1. ಈ ಜೀವಿಯು ಹಾರುತ್ತದೆ (2).
2. ಆನೆಯನ್ನು ಹೀಗೂ ಹೇಳುತ್ತಾರೆ (2).
3. ಈ ಪ್ರಾಣಿ ನೀರಿನಲ್ಲಿ ಜೀವಿಸುತ್ತದೆ (3).
4. ಈ ಕಪ್ಪು ಬಣ್ಣದ ಪ್ರಾಣಿಗೆ ಜೇನೆಂದರೆ ಪಂಚಪ್ರಾಣ (3).
5. ರಾತ್ರಿ ಕಾಲದಲ್ಲಿ ಬರುತ್ತೇನೆ, ಗೆಡ್ಡೆಗೆಣಸುಗಳೆಂದರೆ ತುಂಬಾ ಇಷ್ಟ (2).
6. ಈ ಪ್ರಾಣಿಯನ್ನು ಕಂಡರೆ ಕೋಳಿ ಅಡಗಿಕೊಳ್ಳುತ್ತದೆ (2).

- ಈ ಪದಬಂಧದಲ್ಲಿ ಬರುವ ವೃತ್ತದೊಳಗಿನ ಅಕ್ಷರಗಳನ್ನು ಜೋಡಿಸಿ ಅರ್ಥಪೂರ್ಣವಾದ ಪದವನ್ನು ಬರೆಯಿರಿ.

| | | | | | |
|---|---|---|---|---|---|
| | | | | | |

# ಕಲಿಕಾ ಕಣಜ



| ಕಲಿಕೋಪಕರಣಗಳು / ವೇದಿಕೆಗಳು | ಚಟುವಟಿಕೆಗಳು |
|---|---|
| ನೋಟು ಪುಸ್ತಕ | ಉತ್ತರ ಬರೆಯಿರಿ, ಪ್ರಾಸ ಪದಗಳು, ಪರ್ಯಾಯ ಪದಗಳು, ಆಸ್ವಾದನಾ ಟಿಪ್ಪಣಿ, ಜೋಡಿಸಿರಿ, ವರ್ಣನೆ, ಜೋಡಿಸಿ ಬರೆಯಿರಿ, ಯಾರು ಯಾರಿಗೆ ಹೇಳಿದರು, ಅನ್ಯದೇಶೀಯ ಪದಗಳು, ಮನವಿಪತ್ರ, ಪಶ್ನೆ ತಯಾರಿ, ಕ್ರಮೀಕರಿಸಿ ಬರೆಯಿರಿ, ಸಂಭಾಷಣೆ ಬರೆಯಿರಿ, ವಾಕ್ಯ ರಚನೆ, ಘೋಷಣಾ ವಾಕ್ಯಗಳು, ಪದಬಂಧ. |
| ಪಠ್ಯಪುಸ್ತಕ | ಪ್ರವೇಶ ಚಟುವಟಿಕೆ, ಪ್ರಾಸಪದಗಳು, ಪರ್ಯಾಯ ಪದಗಳು, ಜೋಡಿಸಿ ಬರೆಯಿರಿ, ಪದಬಂಧ. |
| ದೃಶ್ಯಶ್ರಾವ್ಯ ಮಾಧ್ಯಮ | ಈ ಬಾನು ಈ ಚುಕ್ಕಿ ಪದ್ಯ, ಪ್ರಕೃತಿಗೆ ಸಂಬಂಧಿಸಿ ವೀಡಿಯೋ |
| ಭಿತ್ತಿಪತ್ರಿಕೆ | ರಚನೆಗಳು |
| ಪೋರ್ಟ್ ಫೋಲಿಯೋ | ಪ್ರಕೃತಿಗೆ ಸಂಬಂಧಿಸಿದ ಬಣ್ಣ ಹಚ್ಚಿದ ಚಿತ್ರ, ಎಲ್ಲಾ ರಚನೆಗಳು |
| ಬಾಲಸಭೆ / ಶಾಲಾ ಎಸೆಂಬ್ಲಿ / ಸಿ.ಪಿ.ಟಿ.ಎ. | ಪಾಠಭಾಗದಲ್ಲಿರುವ ಪದ್ಯ, ನಾಟಕ, ಕಥೆ, ಉತ್ತಮ ರಚನೆಗಳು |

# 2. ಹಸಿರು ಹೊನ್ನು

ಭಾರತವು ಕೃಷಿ ಪ್ರಧಾನ ದೇಶವಾಗಿದೆ. ರೈತರು ದೇಶದ ಬೆನ್ನೆಲುಬು. ಅವರು ನಮ್ಮ ಅನ್ನದಾತರು. ಅವರನ್ನು ನಾವು ಗೌರವಿಸಬೇಕು. ನಮ್ಮನ್ನು ನಾವು ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು. ಕೃಷಿಕ್ಷೇತ್ರದ ಸಾಧಕರನ್ನು ತಿಳಿಯುವುದರೊಂದಿಗೆ ಅವರ ಪರಿಶ್ರಮದ ಕುರಿತು ಅಭಿಮಾನಪಡಬೇಕು. ಪ್ರತಿಯೊಬ್ಬರೂ ಕೃಷಿ ಕೆಲಸಗಳಲ್ಲಿ ಸಕ್ರಿಯರಾದಾಗ ನಾಡಿನ ಆಹಾರ ಸಮಸ್ಯೆ ನೀಗುವುದು. ದೇಶ ಸಮೃದ್ಧವಾಗುವುದು.

**ಹಾಡಿರಿ... ನಲಿಯಿರಿ**

## ಮಣ್ಣನು ನಂಬಿ ಲೇಲಯ್ಯ

ಮಣ್ಣನು ನಂಬಿ ಲೇಲಯ್ಯಾ ಮರವಿರುವುದು
ಮರವ ನಂಬಿ ಲೇಲಯ್ಯಾ ಮಣ್ಣಿರುವುದು
ಮರವ ನಂಬಿ ಲೇಲಯ್ಯಾ ರೆಂಬೆ ಇರುವುದು
ರೆಂಬೆಯ ನಂಬಿ ಲೇಲಯ್ಯಾ ಎಲೆ ಇರುವುದು
ಎಲೆಯ ನಂಬಿ ಲೇಲಯ್ಯಾ ಹೂವಿರುವುದು
ಹೂವ ನಂಬಿ ಲೇಲಯ್ಯಾ ಕಾಯಿರುವುದು
ಕಾಯಿಯ ನಂಬಿ ಲೇಲಯ್ಯಾ ಹಣ್ಣಿರುವುದು
ಹಣ್ಣ ನಂಬಿ ಲೇಲಯ್ಯಾ ನಾವಿರುವುದು
ನಮ್ಮಾ ನಂಬಿ ಲೇಲಯ್ಯಾ ನಾಡಿರುವುದು

*ಅಟ್ಟಪಾಡಿಯ ಇರುಳರ ಹಾಡು*



# ರೈತ



ರೈತ ನಮ್ಮ ಬಂಧುವು
ತುಂಬಲಾಯ್ತು ಕಣಜವು
ಕೋಳಿ ಗಂಟೆ ಹೊಡೆಯುವಾಗ
ಹಕ್ಕಿ ಬಳಗ ಹಾಡುವಾಗ
ನಿದ್ದೆ ಬಿಟ್ಟು ಕಣ್ಣ ಬಿಟ್ಟು
ತಂಗಳನ್ನೆ ಉಂಬನು
ಗದ್ದೆಯತ್ತ ನಡೆವನು





ಸಂಜೆ ತನಕ ಬೆವರನಿಳಿಸಿ
ಹೊಲದಿ ಗೆಯ್ದು ಮಣ್ಣು ಬಳಿದು
ಹಸಿದ ಹೊಟ್ಟೆ ಜೋಲು ಬಿಟ್ಟು
ದಣಿದು ದಣಿದು ಬರುವನು
ಅಯ್ಯೋ ದೇವರೆನುವನು
ಕಂಬಳಿಯನು ಹೊದ್ದುಕೊಂಡು
ಗಂಟಿ ಜೋಡ ಅಟ್ಟಿಕೊಂಡು
ನೊಗವನಟ್ಟಿ ನೇಗಿಲಿಟ್ಟು
ಉತ್ತು ಹಲಗೆಯೆಳೆವನು
ಬೀಜ ಬಿತ್ತಿ ಬೆಳೆವನು
ಚಳಿಯೊ ಮಳೆಯೊ ಏನೇ ಬರಲಿ
ಹಗಲು ಇರುಳು ದುಡಿವನವನು
ಉಣಲು ತಿನಲು ಸಾಲದಿರಲು
ಹೊತ್ತು ಹೊನ್ನು ಎನುವನು
ದಕ್ಕುದನು ಕಾಣುವನು
ಅವನೆ ರೈತ ದೇವ ಬಕುತ
ಅವನ ಗೈತ ಅದುವೆ ಸುಕೃತ
ಎಲ್ಲಿ ರೈತ ಸುಖದೊಳಿಹನೊ
ಅಲ್ಲಿ ನೀತಿ ಶಾಂತಿಯು
ಅದುವೇ ಪುಣ್ಯ ಭೂಮಿಯು

*ಡಿ.ವಿ. ಹೊಳ್ಳ*











## ಚಟುವಟಿಕೆಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ರೈತ ತನ್ನ ಗದ್ದೆಯತ್ತ ಯಾವಾಗ ಹೋಗುವನು?
2. ರೈತ ಹೇಗೆ ಕಷ್ಟಪಟ್ಟು ದುಡಿಯುತ್ತಾನೆ ಎಂದು ಕವಿ ಹೇಳಿದ್ದಾರೆ?
3. ರೈತ ಗದ್ದೆಯನ್ನು ಹೇಗೆ ಉಳುತ್ತಾನೆ ಎಂದು ಕವಿ ಹೇಳುತ್ತಾರೆ?
4. ಶಾಂತಿ ನೆಲೆಸಿರುವುದು ಎಲ್ಲಿ?

### ಪದ್ಯಕ್ಕೆ ರಾಗ ಹಾಕಿ ಹಾಡಿರಿ.

### ಜೋಡಿಸಿ ಬರೆಯಿರಿ.

ಕೆಳಗೆ ಕೊಡಲಾದ ಪದಗಳನ್ನು ಜೋಡಿಸಿ ಬರೆಯಿರಿ.

| | | | | |
|---|---|---|---|---|
| ಬೆವರನು | + | ಇಳಿಸಿ | = | .............................. |
| ದೇವರು | + | ಎನುವನು | = | .............................. |
| ದುಡಿವನು | + | ಅವನು | = | .............................. |
| ಸಾಲದು | + | ಇರಲು | = | .............................. |
| ಸುಖದೊಳು | + | ಇಹನೊ | = | .............................. |
| ಹಲಗೆ | + | ಎಳೆವನು | = | .............................. |

### ಪ್ರಾಸ ಪದ ಗುರುತಿಸುವ

ಈ ಪದ್ಯ ಭಾಗದಲ್ಲಿ ಬಂದಿರುವ ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.

ಉದಾ : ಹೊಡೆಯುವಾಗ - ಹಾಡುವಾಗ

### ಕಂಡು ಹಿಡಿಯುವ

ಕೆಳಗೆ ನೀಡಲಾದವುಗಳಲ್ಲಿ ಸರಿಯಾದ ಪದಕ್ಕೆ ಉರುಟು ಹಾಕಿರಿ.

ಖನಜ, ಕಣಜ, ಕನಜ

ಹೊಳದಿ, ಹೊಲಧಿ, ಹೊಲದಿ

ದನಿದು, ದಣಿದು, ಧಣಿದು

ದೈವ, ದೈವಾ, ಧೃವ

ಪುನ್ಯ, ಪುಣ್ಯ, ಪೂಣ್ಯ

## ಕವಿತೆ ಮುಂದುವರಿಸಿ ಬರೆಯುವ

ಕೆಳಗೆ ಕೊಟ್ಟಿರುವ ಸಾಲುಗಳನ್ನು ಮುಂದುವರಿಸಿ ಕವಿತೆ ರಚಿಸಿರಿ. ಶೀರ್ಷಿಕೆ ನೀಡಿರಿ.

| |
|---|
| |

ಮುಂಜಾನೆದ್ದು
ನೇಗಿಲ ಹಿಡಿದು
ಹೊಲದೆಡೆ ನಡೆಯೋಣ
ನಾವು ಹೊಲದೆಡೆ ನಡೆಯೋಣ

ಹೊಲವನು ಉತ್ತು
ಬೀಜವ ಬಿತ್ತಿ
ಬೆಳೆಯನು ಬೆಳೆಸೋಣ
ನಾವು ಬೆಳೆಯನು ಬೆಳೆಸೋಣ

..........................................
..........................................
..........................................
..........................................

..........................................
..........................................
..........................................
..........................................

# ಕೈ ಕೆಸರಾದರೆ ಬಾಯಿ ಮೊಸರು

ಒಂದೂರಿನಲ್ಲಿ ಒಬ್ಬ ಮುದುಕನಾದ ರೈತನಿದ್ದನು. ಅವನಿಗೆ ಮೂವರು ಮಕ್ಕಳಿದ್ದರು. ಅವನ ಮೊದಲೆರಡು ಮಕ್ಕಳು ಬಹಳ ಸೋಮಾರಿಗಳಾಗಿದ್ದರು. ಕೊನೆಯ ಮಗ ಕಷ್ಟ ಪಟ್ಟು ದುಡಿಯುತ್ತಿದ್ದನು. ಆ ರೈತನಿಗೆ ಮೊದಲೆರಡು ಮಕ್ಕಳ ಬಗ್ಗೆ ಬಹಳ ಚಿಂತೆ ಇತ್ತು. ಅವರು ಜವಾಬ್ದಾರಿಯನ್ನು ಯಾವಾಗ ಕಲಿಯುವರೋ ಎಂದು ಆತ ಯೋಚಿಸುತ್ತಿದ್ದ. ಅದಕ್ಕಾಗಿ ಆತ ಒಂದು ಉಪಾಯವನ್ನು ಮಾಡಿದನು.

ಆತ ತನ್ನ ಮೂವರು ಮಕ್ಕಳನ್ನು ಹತ್ತಿರಕ್ಕೆ ಕರೆದು ಹೇಳಿದ "ನನ್ನ ಪ್ರೀತಿಯ ಮಕ್ಕಳೇ, ನನಗೆ ವಯಸ್ಸಾಗುತ್ತಿದೆ. ನನಗೆ ಇನ್ನು ಗದ್ದೆಯಲ್ಲಿ ದುಡಿಯಲು ಸಾಧ್ಯವಿಲ್ಲ. ನಾನು ನನ್ನ ಭೂಮಿಯನ್ನು ಮೂರು ಭಾಗವಾಗಿ ಮಾಡುತ್ತೇನೆ. ನಿಮ್ಮ ನಿಮ್ಮ ಜಾಗದಲ್ಲಿ ಬೆಳೆಯನ್ನು ಬೆಳೆಸಿರಿ. ಈ ವರ್ಷಕ್ಕೆ ಬೇಕಾದಷ್ಟು ಅಕ್ಕಿ ಮೂಟೆಗಳಿವೆ. ಮುಂದಿನ ವರ್ಷದ ಉಪಯೋಗಕ್ಕೆ ನೀವು ಧಾನ್ಯಗಳನ್ನು ಬೆಳೆಸಬೇಕು. ಅದಕ್ಕಾಗಿ ನೀವು ಇಂದೇ ಕೆಲಸ ಆರಂಭಿಸಬೇಕು ಎಂದನು. ಹಿರಿಯರಿಬ್ಬರಿಗೆ ಇದು ಇಷ್ಟವಿಲ್ಲದಿದ್ದರೂ ತಂದೆಯ ಮಾತನ್ನು ಒಪ್ಪಲೇಬೇಕಾಗಿತ್ತು. ಮರುದಿನ



ರೈತ ತನ್ನ ಮಕ್ಕಳೊಂದಿಗೆ ಗದ್ದೆಗೆ ಹೋಗಿ ಗದ್ದೆಯನ್ನು ಮೂರು ಭಾಗಗಳಾಗಿ ಮಾಡಿದನು. "ನನಗೆ ಕೆರೆಯ ಪಕ್ಕದಲ್ಲಿರುವ ಗದ್ದೆ ಬೇಕು" ಎಂದ ಹಿರಿಯ ಮಗ. ಆ ಮಾತಿಗೆ ರೈತನು ಒಪ್ಪಿದನು. ಅದಕ್ಕೆ ತಾಗಿಕೊಂಡಿರುವ ಗದ್ದೆಯನ್ನು ಎರಡನೇ ಮಗ ಪಡೆದುಕೊಂಡರೆ, ಕೆರೆಗೆ ಸ್ವಲ್ಪ ದೂರದಲ್ಲಿರುವ ಗದ್ದೆಯು ಕೊನೆಯ ಮಗನ ಪಾಲಿಗಾಯ್ತು.

ಕೊನೆಯ ಮಗ ಸಂತೋಷದಿಂದ ಆ ದಿನದಿಂದಲೇ ಕಷ್ಟಪಟ್ಟು ದುಡಿಯ ತೊಡಗಿದನು. ತನ್ನ ಗದ್ದೆಯಿಂದ ಹುಲ್ಲು, ಕಳೆಗಳನ್ನು ಕೀಳತೊಡಗಿದನು. ಆದರೆ ಹಿರಿಯ ಮಗ ಮತ್ತು ಎರಡನೆಯ ಮಗ ಮರದ ಕೆಳಗೆ ಹಾಯಾಗಿ ಮಲಗಿ ನಿದ್ರಿಸಿದರು.

ಅದನ್ನು ನೋಡಿದ ಕೊನೆಯ ಮಗ, "ಅಣ್ಣಂದಿರೇ, ಏಳಿ, ನಿಮ್ಮ ಗದ್ದೆಯಲ್ಲಿನ ಕಳೆ ತೆಗೆಯಬೇಡವೆ? ಬಿತ್ತನೆ ಮಾಡಲು ತಡವಾಗುತ್ತಿದೆ.'' ಎಂದು ಹೇಳಿದನು. "ಹೋಗೋ... ಹೋಗೋ... ನಾಳೆ ಮಾಡ್ಕೊಂಡ್ರಾಯ್ತು'' ಎಂದು ಅವರಿಬ್ಬರೂ ತಮ್ಮನನ್ನು ಗದರಿಸಿದರು. ಬಿತ್ತನೆ ಮಾಡಲು ತಡವಾಗುವುದೆಂದು ಕೊನೆಯ ಮಗ ಅಣ್ಣಂದಿರ ಪಾಲಿನ ಗದ್ದೆಯಲ್ಲಿನ ಕಳೆಯನ್ನು ತಾನೇ ತೆಗೆದನು.

ಮರುದಿನ ಕೊನೆಯ ಮಗ ತನ್ನ ಪಾಲಿನ ಗದ್ದೆಯನ್ನು ಉಳತೊಡಗಿದನು. ಬಳಿಕ ಬಿತ್ತನೆಯನ್ನು ಮಾಡಿದನು. ಆದರೂ ಅಣ್ಣಂದಿರಿಬ್ಬರು ಗೆಳೆಯರ ಜೊತೆ ಹರಟೆ ಹೊಡೆಯುತ್ತಾ ಆರಾಮವಾಗಿದ್ದರು. ಈಸಲವೂ ಕೊನೆಯ ಮಗ ಅಣ್ಣಂದಿರನ್ನು ಕೆಲಸ ಮಾಡಲು ಕರೆದನು.



"ನಮ್ಮ ಕೆಲಸವನ್ನು ಮಾಡಲು ನಮಗೆ ಗೊತ್ತಿದೆ. ನೀನು ಉಪದೇಶ ಮಾಡಲು ಬರಬೇಡ. ಗದ್ದೆ ಕೆಲಸ ಮಾಡಲು ಅಂಥ ಅವಸರವೇನೂ ಇಲ್ಲ. ಹೋಗಾಚೆ'' ಎಂದು ಅವನನ್ನು ಅಣ್ಣಂದಿರು ಬೈದು ಕಳುಹಿಸಿದರು.

ಕೊನೆಯ ಮಗ ಕೊಂಚವೂ ವಿರಮಿಸದೆ ಅವರಿಬ್ಬರ ಗದ್ದೆಯನ್ನು ತಾನೇ ಉತ್ತು, ಬಿತ್ತನೆಯನ್ನು ಮಾಡಿದನು. ಯಾವ ಕೆಲಸಕ್ಕೆ ಕರೆದರೂ, ಅಣ್ಣಂದಿರು ಬಾರದೆ ಅಲ್ಲಿ ಇಲ್ಲಿ ತಿರುಗಾಡುತ್ತಾ ತಿಂದುಂಡು ದಿನ ಕಳೆಯುತ್ತಿದ್ದರು. ಇದನ್ನು ಕಂಡು ರೈತನ ಚಿಂತೆ ಹೆಚ್ಚುತ್ತಿತ್ತು.

ಕೊನೆಯ ಮಗನೇ ಮೂರು ಗದ್ದೆಗಳ ಕೆಲಸ ಕಾರ್ಯವನ್ನು ಹಗಲಿರುಳೆನ್ನದೆ ಮಾಡತೊಡಗಿದನು. ಎಲ್ಲಾ ಗದ್ದೆಯಲ್ಲಿಯೂ ಉತ್ತಮ ಫಸಲು ಬಂದಿತ್ತು. ಈಗಲೂ ಕೊನೆಯ ಮಗ ಬೆಳೆ ಕಟಾವು ಮಾಡಲು, ಮನೆಗೆ ಸಾಗಿಸಲು ಅಣ್ಣಂದಿರನ್ನು ಕರೆದನು. ಆದರೂ ಅವರು ಬರಲಿಲ್ಲ. ಕೊನೆಯ ಮಗನೇ ಮೂರು ಗದ್ದೆಗಳ ಬೆಳೆಯನ್ನು ಕೊಯ್ದು, ಭತ್ತವನ್ನು ಬೇರ್ಪಡಿಸಿ ಮಿಲ್ಲಿಗೆ ಕೊಂಡೊಯ್ದು ಅಲ್ಲಿಂದ ಅಕ್ಕಿಯ ಮೂಟೆಗಳನ್ನೆಲ್ಲಾ ಮನೆಗೆ ಸಾಗಿಸಿದನು. ತಮ್ಮನೇ ಕೆಲಸಗಳನ್ನು ನೋಡಿ, "ಎಲ್ಲಾ ಕೆಲಸಗಳನ್ನು ತಮ್ಮ ಮಾಡುತ್ತಿದ್ದಾನಲ್ಲ, ಮತ್ತೆ ನಾವೇಕೆ ಕೆಲಸ ಮಾಡಬೇಕು'' ಎಂದು ಅಣ್ಣಂದಿರಿಬ್ಬರೂ ಸುಮ್ಮನಿದ್ದರು.

"ಅಪ್ಪಾ, ಈ ವರ್ಷ ಎಷ್ಟು ಚೆನ್ನಾಗಿ ಬೆಳೆ ಬಂದಿದೆ ನೋಡಿ. ಎಷ್ಟೊಂದು ಅಕ್ಕಿ ಮೂಟೆಗಳು" ಎಂದು ಕೊನೆಯ ಮಗ ಅಪ್ಪನಲ್ಲಿ ಹರ್ಷದಿಂದ ಹೇಳಿದನು. ಆಗ ರೈತ "ಭೇಷ್ ಮಗನೆ, ನೀನು ನಿಜವಾಗಿಯೂ ಒಳ್ಳೆಯ ಕೆಲಸಗಾರ" ಎಂದು ಬೆನ್ನು ತಟ್ಟಿದನು.

ಆಗ ಹಿರಿಯ ಮಕ್ಕಳು ರೈತನ ಬಳಿಗೆ ಬಂದು "ಅಪ್ಪಾ, ಇದರಲ್ಲಿ ನಮ್ಮ ಪಾಲೆಷ್ಟು'' ಎಂದು ಕೇಳಿದರು. "ಸ್ವಲ್ಪ ತಡೆಯಿರಿ" ಎಂದು ಹೇಳಿದ ರೈತ.

"ನಿಮ್ಮ ಗದ್ದೆಯ ಕಳೆ ಕೀಳುವುದು, ಉಳುಮೆ, ಬಿತ್ತನೆ ಕೆಲಸವನ್ನೆಲ್ಲ ಯಾರು ಮಾಡಿದರು? ನಿಮ್ಮ ಗದ್ದೆಗೆ ಯಾರು ನೀರು ಉಣಿಸಿದರು? ಯಾರು ಗೊಬ್ಬರ ಹಾಕಿದರು? ನಿಮ್ಮ ಗದ್ದೆಯ ಫಸಲನ್ನು ಯಾರು ಕೊಯ್ದರು? ಯಾರು ಅದನ್ನು ಮನೆಯವರೆಗೆ ಹೊತ್ತು ತಂದರು? ಹೇಳಿ ನೋಡೋಣ'' ಎಂದು ರೈತ ಕೇಳಿದನು.

ಈಗ ಉತ್ತರ ಹೇಳಲು ಹಿರಿಯ ಮಕ್ಕಳಿಗೆ ನಾಚಿಕೆಯಾಯಿತು. ಅವರ ಬಾಯಿಯಿಂದ ಒಂದು ಮಾತೂ ಹೊರಡಲಿಲ್ಲ. "ನೀವೇನು ಮಾಡಿದಿರಿ? ನಿಮಗೂ ನಿಮ್ಮ ಪಾಲಿನ ಗದ್ದೆಯನ್ನು ಕೊಟ್ಟಿದ್ದೇನಲ್ಲ?" ಎಂದ ರೈತ ಸಿಟ್ಟಿನಿಂದ. "ನಮ್ಮ ತಮ್ಮ ಎಷ್ಟೆಲ್ಲ ಕೆಲಸ ಮಾಡಿದ, ನಾವು ಮಾತ್ರ ಸುಮ್ಮನಿದ್ದೆವು. ಛೇ! ನಾವೂ ಕೆಲಸ ಮಾಡುತ್ತಿದ್ದರೆ

ನಮಗೂ ಪಾಲು ಸಿಗುತ್ತಿತ್ತು" ಎಂದು ಹಿರಿಯ ಮಕ್ಕಳು ಅಂದುಕೊಂಡರು. "ನಿಮಗೇನು ಕೊಡುವುದಿಲ್ಲ. ಎಲ್ಲವನ್ನು ಕಷ್ಟಪಟ್ಟು ಕೆಲಸ ಮಾಡುವ ನಿಮ್ಮ ತಮ್ಮನಿಗೆ ಕೊಟ್ಟುಬಿಡುತ್ತೇನೆ" ಎಂದ ರೈತ. "ಅಪ್ಪಾ, ಅವರನ್ನು ಕ್ಷಮಿಸಿಬಿಡಿ. ಬಹುಶ: ಅವರಿಗೀಗ ತಮ್ಮ ತಪ್ಪಿನ ಅರಿವಾಗಿದೆ" ಎಂದ ಕೊನೆಯ ಮಗ. "ಅಪ್ಪಾ, ದಯವಿಟ್ಟು ನಮ್ಮನ್ನು ಕ್ಷಮಿಸಿ. ಇಷ್ಟು ಸಮಯ ಸೋಮಾರಿಗಳಾಗಿ ಏನೂ ಕೆಲಸ ಮಾಡದೆ ದಿನ ಕಳೆದೆವು. ಇನ್ನು ಮುಂದೆ ಹಾಗೆ ಮಾಡುವುದಿಲ್ಲ" ಎಂದು ಹಿರಿಯ ಮಕ್ಕಳಿಬ್ಬರೂ ತಂದೆಯ ಕಾಲಿಗೆ ಬಿದ್ದರು. ಅಂದಿನಿಂದ ಅವರು ಗದ್ದೆಯಲ್ಲಿ ಕಷ್ಟಪಟ್ಟು ದುಡಿಯಲು ಪ್ರಾರಂಭಿಸಿದರು. ಒಳ್ಳೆಯ ಫಸಲು ದೊರೆಯಿತು. ಇದನ್ನು ಕಂಡು ರೈತನಿಗೂ ಸಂತೋಷವಾಯಿತು. ತನ್ನ ಮಕ್ಕಳೊಡನೆ "ಕಷ್ಟಪಟ್ಟು ದುಡಿದರೆ ಒಳ್ಳೆಯ ಫಲ ಸಿಗುತ್ತದೆ ಎಂಬುದು ಅರ್ಥವಾಯಿತಲ್ಲ" ಎಂದು ಹೇಳಿ ನೆಮ್ಮದಿಯ ನಿಟ್ಟುಸಿರುಬಿಟ್ಟನು.

***ರಾಜೇಶ್ವರಿ ಜಯಕೃಷ್ಣ***

**(ವಾಸನ್ ಪಬ್ಲಿಕೇಶನ್ಸ್)**



## ಚಟುವಟಿಕೆಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ರೈತ ತನ್ನ ಗದ್ದೆಯನ್ನು ಪಾಲು ಮಾಡಲು ಕಾರಣವೇನು?
2. ರೈತ ತನ್ನ ಗದ್ದೆಯನ್ನು ಎಷ್ಟು ಪಾಲು ಮಾಡಿದನು?
3. ರೈತನ ಮೂವರು ಮಕ್ಕಳಲ್ಲಿ ಕಷ್ಟಪಟ್ಟು ದುಡಿಯುತ್ತಿದ್ದುದು ಯಾರು?
4. ಕೊನೆಯ ಮಗ ಅಣ್ಣಂದಿರನ್ನು ಗದ್ದೆಯ ಕಳೆಯನ್ನು ಕೀಳಲು ಕರೆದಾಗ ಅವರು ಏನು ಹೇಳಿದರು?
5. ಹಿರಿಯ ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಗಿ ತಂದೆಯೊಡನೆ ಏನು ಹೇಳಿದರು?

### ಕೆಳಗಿನ ಮಾತುಗಳನ್ನು ಯಾರು ಹೇಳಿದರು ಎಂದು ವಾಕ್ಯದಲ್ಲಿ ಬರೆಯಿರಿ.

1. "ನಾನು ನನ್ನ ಭೂಮಿಯನ್ನು ಮೂರು ಭಾಗ ಮಾಡುತ್ತೇನೆ"
2. "ನನಗೆ ಕೆರೆಯ ಪಕ್ಕದಲ್ಲಿರುವ ಗದ್ದೆ ಬೇಕು"
3. "ಹೋಗೋ... ಹೋಗೋ... ನಾಳೆ ಮಾಡ್ಕೊಂಡ್ರಾಯ್ತು"
4. "ಅಪ್ಪಾ ಅವರನ್ನು ಕ್ಷಮಿಸಿ ಬಿಡಿ"
5. "ನಿಮ್ಮ ಗದ್ದೆಗೆ ಯಾರು ನೀರು ಉಣಿಸಿದರು?"

### ಕೆಳಗಿನ ವಾಕ್ಯಗಳನ್ನು ಓದಿ ಸರಿ ಅಥವಾ ತಪ್ಪು ಎಂದು ಬರೆಯಿರಿ.

1. ರೈತನ ಕೊನೆಯ ಮಗ ಕಷ್ಟಪಟ್ಟು ದುಡಿಯತ್ತಿದ್ದನು.
2. ಅಣ್ಣ ತಮ್ಮಂದಿರು ಮೂವರೂ ಒಟ್ಟಿಗೆ ಸೇರಿ ಗದ್ದೆ ಕೆಲಸವನ್ನು ಮಾಡಿದರು.
3. ಕೊನೆಯ ಮಗ ತನ್ನ ಪಾಲಿನ ಜಾಗದಲ್ಲಿ ಮಾತ್ರ ಕೆಲಸ ಮಾಡಿದನು.
4. "ಅಪ್ಪಾ... ಇದರಲ್ಲಿ ನಮ್ಮ ಪಾಲೆಷ್ಟು" ಎಂದು ಹಿರಿಯ ಮಕ್ಕಳು ಕೇಳಿದರು.
5. ಕೊನೆಗೆ ಹಿರಿಯ ಮಕ್ಕಳು ಗದ್ದೆಯಲ್ಲಿ ಕಷ್ಟಪಟ್ಟು ದುಡಿಯಲು ಪ್ರಾರಂಭಿಸಿದರು.

### ಪಟ್ಟಿ ತಯಾರಿಸಿರಿ

ಕೃಷಿಗೆ ಉಪಯೋಗಿಸುವ ಯಂತ್ರಗಳು ಮತ್ತು ಉಪಕರಣಗಳ ಪಟ್ಟಿ ತಯಾರಿಸಿರಿ.

- 
- 

**ಕೆಳಗೆ ನೀಡಿರುವ ಗಾದೆಮಾತಿನ ವಿವರಣೆಯನ್ನು ಓದಿರಿ.**

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?

ಇದು ಮಕ್ಕಳ ನಡತೆಗೆ ಸಂಬಂಧಿಸಿದ ಬಹಳ ಅರ್ಥಪೂರ್ಣವಾದ ಒಂದು ಗಾದೆ ಮಾತಾಗಿದೆ. ಚಿಕ್ಕದಾದ ಒಂದು ಗಿಡವನ್ನು ಸುಲಭವಾಗಿ ಬೇಕಾದಂತೆ ಬಗ್ಗಿಸಿ ಉತ್ತಮವಾಗಿ ಬೆಳೆಯುವಂತೆ ಮಾಡಬಹುದು. ಆದರೆ ಅದು ಮರವಾದ ಬಳಿಕ ಬಗ್ಗಿಸಲು ಸಾಧ್ಯವಿಲ್ಲ. ಅಂತೆಯೇ ಬೆಳೆಯುತ್ತಿರುವ ಚಿಕ್ಕ ಮಕ್ಕಳ ಸ್ವಭಾವವನ್ನು ಎಳವೆಯಲ್ಲಿಯೇ ತಿದ್ದಿ ತೀಡಿದರೆ ಅವರನ್ನು ಉತ್ತಮ ವ್ಯಕ್ತಿಗಳಾಗಿ ರೂಪಿಸಬಹುದು.

'ಒಗ್ಗಟ್ಟಿನಲ್ಲಿ ಬಲವಿದೆ' ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

**ಸಂಗ್ರಹಿಸುವ**

ಕೃಷಿಗೆ ಸಂಬಂಧಿಸಿದ ಗಾದೆಮಾತುಗಳನ್ನು ಸಂಗ್ರಹಿಸಿರಿ.

**ನೀಡಿರುವ ಗದ್ಯಭಾಗವನ್ನು ಓದಿರಿ.**

ನೀತು ಮತ್ತು ಮಿನ್ನು ಹೂದೋಟಕ್ಕೆ ಹೋದರು. ಅಲ್ಲಿ ಸೇವಂತಿಗೆ, ಮಲ್ಲಿಗೆ, ಗುಲಾಬಿ, ಗೊಂಡೆ, ಸಂಪಿಗೆ ಮೊದಲಾದ ಹೂವುಗಳು ಅರಳಿದ್ದುವು. ಹಳದಿ, ಬಿಳಿ, ಕೆಂಪು ಬಣ್ಣದ ಹೂವುಗಳಿಂದ ಹೂದೋಟ ಕಂಗೊಳಿಸುತ್ತಿತ್ತು. "ಆಹಾ.... ಈ ಗುಲಾಬಿಯು ಎಷ್ಟು ಸುಂದರವಾಗಿದೆ!" ನೀತು ಹೇಳಿದಳು. "ನಿನಗೆ ಈ ಗುಲಾಬಿ ಬೇಕೇ?" ಮಿನ್ನು ಕೇಳಿದಳು. "ಬೇಡ .... ಬೇಡ. ಅದು ಗಿಡದಲ್ಲಿದ್ದರೆ ಚಂದ" ನೀತು ಹೇಳಿದಳು.

**ಕೆಳಗೆ ನೀಡಿರುವ ಗದ್ಯಭಾಗಕ್ಕೆ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿರಿ.**

ಅಲ್ಲೊಂದು ದೊಡ್ಡ ಮರವಿತ್ತು ಆ ಮರದಲ್ಲಿ ಕಾಗೆ ಗಿಳಿ ಕೋಗಿಲೆ ಮೊದಲಾದ ಪಕ್ಷಿಗಳು ವಾಸಿಸುತ್ತಿದ್ದವು ಒಂದು ದಿನ ಒಂದು ನವಿಲು ಆ ಮರದ ಬಳಿಗೆ ಬಂದಿತು ನವಿಲಿನ ಸೌಂದರ್ಯಕ್ಕೆ ಪಕ್ಷಿಗಳು ಮನಸೋತವು ಆಹಾ..... ಈ ನವಿಲು ಎಷ್ಟೊಂದು ಆಕರ್ಷಕವಾಗಿದೆ ಕಾಗೆ ಹೇಳಿತು ನವಿಲೇ ನವಿಲೇ ನಮ್ಮ ಜೊತೆಗೆ ಆಡಲು ಬರುವೆಯಾ ಕೋಗಿಲೆ ನವಿಲನ್ನು ಕರೆಯಿತು ನಾನು ಬರಲಾರೆ ಎನ್ನುತ್ತಾ ನವಿಲು ದೂರಕ್ಕೆ ಹಾರಿ ಹೋಯಿತು

# ಭತ್ತದ ತಳಿಗಳ ಸರದಾರ

ಸತ್ಯನಾರಾಯಣ ಬೆಳೇರಿಯವರು ಕೃಷಿಕ್ಷೇತ್ರದಲ್ಲಿ ಸಾಧನೆ ಮಾಡಿ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡವರು. ಭತ್ತದ ತಳಿ ಸಂಗ್ರಾಹಕರಾಗಿ ಅವರು ಮಾಡಿದ ಸಾಧನೆ ಗಮನಾರ್ಹವಾದುದು. ಅಂದಾಜು ಆರುನೂರಕ್ಕಿಂತಲೂ ಹೆಚ್ಚು ದೇಶ-ವಿದೇಶದ ಭತ್ತದ ತಳಿಗಳು ಇವರ ಸಂಗ್ರಹದಲ್ಲಿವೆ. ಭತ್ತ, ರಾಗಿ, ಜೋಳ ಯಾವುದೇ ಧಾನ್ಯಗಳನ್ನು ಬೆಳೆಸಬೇಕಾದರೂ ಅವುಗಳ ಪಾಯ ಹೊಲ ಗದ್ದೆಗಳು. ಆದರೆ ಸತ್ಯನಾರಾಯಣರಿಗೆ ಗದ್ದೆ-ಹೊಲವೇ ಇಲ್ಲ. ಕೃಷಿಗೆ ಹೆಚ್ಚು ಯೋಗ್ಯವಲ್ಲದ ಗುಡ್ಡೆ ಜಾಗದಲ್ಲಿ ರಬ್ಬರ್, ಅಡಿಕೆ ಬೆಳೆಸುವ ಸತ್ಯನಾರಾಯಣರು ಇಂಥ ತಳಿವೈವಿಧ್ಯವನ್ನು ಉಳಿಸಲೇಬೇಕೆಂದು ಹತ್ತು ಸೆಂಟ್ಸ್ ಜಾಗದಲ್ಲಿ ಗದ್ದೆ ಮಾಡಿದ್ದಾರೆ. ಆ ಆಯಪಾಯದೊಳಗೆ ಪಾತಿ ಮಾಡಿ ಪ್ಲಾಸ್ಟಿಕ್ ಚೀಲಗಳಲ್ಲಿ ಮಣ್ಣು ತುಂಬಿಸಿ ಬಹುಬಗೆಯ ತಳಿಗಳನ್ನು ಉಳಿಸಿ ಬೆಳೆಸಿದ್ದಾರೆ. ಬೀಜಗಳನ್ನು ಮಣ್ಣಿನ ಗಡಿಗೆಯಲ್ಲೋ ಪೇಪರ್, ಪ್ಲಾಸ್ಟಿಕ್‌ನಲ್ಲೋ ಕಟ್ಟಿಡುವುದು, ಬಳಿಕ ಅವುಗಳ ಮೇಲೆ ಹೆಸರು ಬರೆದಿಟ್ಟರೆ ಮುಗಿಯಿತಲ್ಲ? ಅದನ್ನು ಮತ್ತೆ ಮತ್ತೆ ನೆಲಕ್ಕಿಡುವ, ಬಿತ್ತಿ ಬೆಳೆಸುವ ಹಂಗೇಕೆ? ಇದು ಸಾಮಾನ್ಯ ಪ್ರಶ್ನೆ.





ಎಲ್ಲಾ ಬೀಜಗಳಂತೆ ಭತ್ತದ್ದೂ ಅದೇ ಸಮಸ್ಯೆ. ಆರು ತಪ್ಪಿದರೆ ಎಂಟು ತಿಂಗಳು ಬೀಜಗಳನ್ನು ಹಾಗೆಯೇ ಇಟ್ಟರೆ ಮತ್ತೆ ಮೊಳಕೆ ಬರಲಾರದು. ಅದು ಫಲವತ್ತಿಗೆಯ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಪುನರಪಿ ಬೆಳೆಸಿಯೇ ಬೀಜಗಳನ್ನು ಕಾಯ್ದುಕೊಳ್ಳಬೇಕು. ಈ ಕಾರಣಕ್ಕಾಗಿಯೇ ತಳಿ ಉಳಿಸುವ ಪ್ರಯತ್ನವಾದಿಗಳ ಬಗ್ಗೆ ಕೃಷಿಲೋಕದಲ್ಲೊಂದು ಸಹಜ ಬೆರಗು ಇದ್ದೇ ಇದೆ. ಇಂದು ಹತ್ತಲ್ಲ, ಇಪ್ಪತ್ತಲ್ಲ ಆರುನೂರಕ್ಕಿಂತಲೂ ಹೆಚ್ಚು ತಳಿಗಳು ಸತ್ಯನಾರಾಯಣರಲ್ಲಿವೆ ಎಂಬುದು ಇಡೀ ದೇಶವೇ ಬೆರಗುಗೊಳ್ಳುವ ಸುದ್ದಿ.

ಸತ್ಯನಾರಾಯಣರು ಈಗ ವಾಸವಿರುವುದು ಕೇರಳ ಕರ್ನಾಟಕದ ಗಡಿ ಭಾಗವಾದ ನೆಟ್ಟಣಿಗೆ ಗ್ರಾಮದ ಬೆಳೇರಿಯಲ್ಲಿ. ಸಣ್ಣ ಸಣ್ಣ ಹಿಡುವಳಿಗಳಲ್ಲಿ ಕೇರಳದ ನೆಲದವರು ಮಾಡಿರುವ ಪ್ರಯೋಗಗಳೇನು ಕಡಿಮೆಯಲ್ಲ. ಕೇರಳ ಕರ್ನಾಟಕ ಎರಡೂ ರಾಜ್ಯಗಳ ಕೃಷಿಕೇಂದ್ರ, ಕೃಷಿ ವಿಶ್ವವಿದ್ಯಾನಿಲಯಗಳ ಪರಿಚಯ, ಕೊಡುಕೊಳ್ಳುವಿಕೆಯ ವಿಷಯಗಳಲ್ಲಿ ಸತ್ಯನಾರಾಯಣರು ಹಿಂದೆ ಬಿದ್ದಿಲ್ಲ. ಈ ಕಾರಣಕ್ಕೆ ಭತ್ತದ ಹೊಸ ತಳಿ ಎಲ್ಲಿಯೇ ಇರಲಿ, ಅವು ಸುಲಭವಾಗಿ ಇವರ ಕೈಸೇರುತ್ತದೆ. ಬೀಜ ಬೇಕಾದರೆ ಹಣ ಪಡೆಯದೆ ಅಂಚೆಯಲ್ಲೇ ಕಳುಹಿಸುವ ಉದಾರ ಹೃದಯಿಗಳಾಗಿದ್ದಾರೆ.

ಸತ್ಯನಾರಾಯಣ ಬೆಳೇರಿಯವರು ದೇಶದ ಇನ್ನಿತರ ರೈತರಿಂದ, ವಿಶ್ವ ವಿದ್ಯಾನಿಲಯಗಳಿಂದ, ಮಾತ್ರವಲ್ಲದೆ ಕೃಷಿ ಅಧ್ಯಯನ ಕೇಂದ್ರಗಳಿಂದಲೂ ತರಾವರಿ ಬೀಜಗಳನ್ನು ಸಂಗ್ರಹಿಸಿದ್ದೂ ಇದೆ. ಕೆಲವರಿಗೆ ಪರ್ಯಾಯವಾಗಿ ತನ್ನಲ್ಲಿರುವ ಬೇರೆ

ಬೀಜಗಳನ್ನು ಒದಗಿಸಿದರೆ, ಅನೇಕ ಕಡೆ ಹಣ ಕೊಟ್ಟು ಪಡೆದದ್ದೂ ಇದೆ. ಕೇರಳದ ವಯನಾಡು, ಪಟ್ಟಾಂಬಿ, ಮಲಪ್ಪುರಂ ಹಾಗೆಯೇ ಕರ್ನಾಟಕ ರಾಜ್ಯದ ಬೆಳ್ತಂಗಡಿ, ಶಿವಮೊಗ್ಗ, ದಾವಣಗೆರೆ, ಮೈಸೂರು, ಮಂಡ್ಯ ಭಾಗಗಳಿಗೂ ಹೋಗಿ ಬೀಜ ಸಂಗ್ರಹಿಸಿದ್ದಾರೆ.

ಮೂಲತಃ ಸತ್ಯನಾರಾಯಣರ ಹಿರಿಯರು ಕೃಷಿಕರು. ಗದ್ದೆ ಸಾಗುವಳಿದಾರರು. ಕೃಷಿಯಲ್ಲಿ ಯಾರೂ ಮಾಡದ ತಳಿಸಂಗ್ರಹ ಸಾಧನೆಯನ್ನು ಮಾಡಿ ಇದೀಗ ಸತ್ಯನಾರಾಯಣರು ದಾಖಲೆಯನ್ನೇ ಸೃಷ್ಟಿಸಿದ್ದಾರೆ. ಇವರ ಸಾಧನೆಯನ್ನು ಗುರುತಿಸಿ ಭಾರತ ಸರಕಾರವು 2023 ರ ಸಾಲಿನ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಮಾತ್ರವಲ್ಲದೆ ಭಾರತ ಸರಕಾರದ ಕೃಷಿ ಇಲಾಖೆ 'ಸಸ್ಯ ತಳಿ ಸಂರಕ್ಷಕ' ಎಂಬ ರಾಷ್ಟ್ರ ಪ್ರಶಸ್ತಿ, ಕೇರಳ ರಾಜ್ಯ ಸರಕಾರದ ಅರಣ್ಯ ಇಲಾಖೆಯು ನೀಡುವ 'ವನಮಿತ್ರ' ಪ್ರಶಸ್ತಿ ಮತ್ತು 'ಜೀವ ವೈವಿಧ್ಯ ಸಂರಕ್ಷಕ' ಪ್ರಶಸ್ತಿ ಲಭಿಸಿದೆ.

*ಡಾ. ನರೇಂದ್ರ ರೈ ದೇರ್ಲ*

ನರೇಂದ್ರ ರೈ ದೇರ್ಲ ಅವರು ಪರಿಸರ ಸಂಬಂಧಿ ಬರಹಗಳಿಂದ ಗುರುತಿಸಿಕೊಂಡವರು. ಕನ್ನಡ ಪ್ರಾಧ್ಯಾಪಕರು, ಲೇಖಕರು, ಅಂಕಣ ಬರಹಗಾರರು ಆದ ಇವರು ಉತ್ತಮ ವಾಗ್ಮಿ, ಸಾಹಿತಿ ಹಾಗೂ ಪ್ರಗತಿಪರ ಚಿಂತಕರಾಗಿದ್ದಾರೆ.

## ಚಟುವಟಿಕೆಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಸತ್ಯನಾರಾಯಣರ ಸಂಗ್ರಹದಲ್ಲಿ ಅಂದಾಜು ಎಷ್ಟು ಭತ್ತದ ತಳಿಗಳಿವೆ?
2. ಸತ್ಯನಾರಾಯಣ ಬೆಳೇರಿಯವರು ಭತ್ತದ ತಳಿಗಳನ್ನು ಹೇಗೆ ಉಳಿಸಿ ಬೆಳೆಸಿದ್ದಾರೆ?
3. ಸತ್ಯನಾರಾಯಣರು ಪ್ರಸ್ತುತ ಎಲ್ಲಿ ವಾಸವಾಗಿದ್ದಾರೆ?
4. ಬೆಳೇರಿಯವರು ಯಾವೆಲ್ಲಾ ಕಡೆಗಳಿಂದ ಬೀಜ ಸಂಗ್ರಹಿಸಿದ್ದಾರೆ?
5. ಬೆಳೇರಿಯವರ ಸಾಧನೆಯನ್ನು ಗುರುತಿಸಿ ಯಾವೆಲ್ಲಾ ಪ್ರಶಸ್ತಿಗಳು ದೊರಕಿವೆ?

**ಕೆಳಗೆ ಕೊಟ್ಟ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ಅರ್ಥವನ್ನು ಕೊಡುವ ಪದವನ್ನು ಪಾಠಭಾಗದಿಂದ ಆಯ್ದು ಆ ಪದವನ್ನುಪಯೋಗಿಸಿ ಹೊಸ ವಾಕ್ಯಗಳನ್ನು ರಚಿಸಿರಿ.**

1. ಪುನರಪಿ ಬೆಳೆಸಿಯೆ ಬೀಜಗಳನ್ನು <u>ರಕ್ಷಿಸಿಕೊಳ್ಳಬೇಕು.</u>
2. ತಳಿ ಉಳಿಸುವ ಪ್ರಯತ್ನವಾದಿಗಳ ಬಗ್ಗೆ ಕೃಷಿ ಲೋಕದಲ್ಲೊಂದು <u>ವಿಸ್ಮಯ</u> ಇದ್ದೇ ಇದೆ.
3. ಬೀಜ ಬೇಕಾದರೆ ಹಣ ಪಡೆಯದೆ ಅಂಚೆಯಲ್ಲೇ ಕಳುಹಿಸುವ <u>ವಿಶಾಲ</u> ಹೃದಯಿಗಳಾಗಿದ್ದಾರೆ.
4. ವಿಶ್ವವಿದ್ಯಾನಿಲಯಗಳಿಂದ ಮಾತ್ರವಲ್ಲದೆ ಕೃಷಿ ಅಧ್ಯಯನ ಕೇಂದ್ರಗಳಿಂದಲೂ <u>ಹಲವು ಬಗೆಯ</u> ಬೀಜಗಳನ್ನು ಸಂಗ್ರಹಿಸಿದ್ದೂ ಇದೆ.

**ಕೃಷಿಗೆ ಸಂಬಂಧಿಸಿದ ಒಗಟುಗಳಿಗೆ ಉತ್ತರ ಬರೆಯಿರಿ.**

1. ದೊಣ್ಣೆಯಂತಹ ಹುಡುಗ<br>ದೊಡ್ಡ ಬುಟ್ಟಿಯಂತ ಟೋಪಿ. [ ]
2. ಬಿಳಿ ಎತ್ತಿಗೆ ಹಸಿರು ಬಾಲ. [ ]
3. ಹಸಿರು ಕೋಟೆಯೊಳಗೆ ಕೆಂಪು ಕೋಟೆ<br>ಕೆಂಪು ಕೋಟೆಯೊಳಗೆ ಕಪ್ಪು ಸಿಪಾಯಿಗಳು. [ ]
4. ಮುಳ್ಳಿನ ಗಿಡದಲ್ಲಿ ಚಿನ್ನದ ಮೊಟ್ಟೆ. [ ]
5. ಒಂದು ಮಡಕೆ ಮಡಕೆಯೊಳಗೆ ಕುಡಿಕೆ<br>ಕುಡಿಕೆಯಲ್ಲಿ ಸಿಹಿನೀರು. [ ]

**ಪದಗಳನ್ನು ಸರಿಪಡಿಸಿ ಬರೆಯಿರಿ.**

- ವೈಳಿಧ್ಯತವಿ -
- ಹುಗೆಬಯಬ -
- ತ್ರಿಫಯವಗೆಲ -
- ಯರ್ಾಗಿಯಪವಾ -
- ಳಿಸಾರುವದಾಗುರ -

### ಸಂದರ್ಶನ ನಡೆಸುವ

ಸತ್ಯನಾರಾಯಣ ಬೆಳೇರಿಯವರಂತೆ ನಮ್ಮ ಊರಿನಲ್ಲೂ ಕೃಷಿಯನ್ನು ಮಾಡುವವರಿದ್ದಾರಲ್ಲವೇ? ಓರ್ವ ಕೃಷಿಕನೊಂದಿಗೆ ಸಂದರ್ಶನ ಮಾಡಲು ಪ್ರಶ್ನಾವಳಿ ತಯಾರಿಸೋಣ.

### ಪಟ್ಟಿ ಮಾಡಿರಿ

ನಿಮ್ಮೂರಿನಲ್ಲಿ ಬೆಳೆಯುವ ವಿವಿಧ ಬೆಳೆಗಳನ್ನು ಪಟ್ಟಿ ಮಾಡಿರಿ.

### ವ್ಯಕ್ತಿ ಪರಿಚಯ



ಎಂ.ಎಸ್. ಸ್ವಾಮಿನಾಥನ್

**ಎಂ.ಎಸ್. ಸ್ವಾಮಿನಾಥನ್**

| | | |
|---|---|---|
| ಜನನ | : | 7 ಅಗೋಸ್ತು 1925 |
| ಹುಟ್ಟೂರು | : | ತಂಜಾವೂರು, ತಮಿಳ್ನಾಡು |
| ಪತ್ನಿ | : | ಮೀನಾ ಸ್ವಾಮಿನಾಥನ್ |
| ತಂದೆ | : | ಎಂ.ಕೆ. ಸಾಂಬಶಿವನ್ |
| ತಾಯಿ | : | ಪಾರ್ವತಿ ತಂಗಮ್ಮಾಳ್ |
| ಪ್ರಶಸ್ತಿ | : | ಪದ್ಮಶ್ರೀ (1967) |
| | | ರಮೋನ್ ಮ್ಯಾಗ್ಸಸೆ (1971) |
| | | ಪದ್ಮಭೂಷಣ (1972) |
| | | ಪದ್ಮವಿಭೂಷಣ (1989) |
| | | ಭಾರತರತ್ನ (2024) |
| ಕ್ಷೇತ್ರ | : | ಕೃಷಿವಿಜ್ಞಾನ |
| ಬಿರುದು | : | ಹಸಿರು ಕ್ರಾಂತಿಯ ಪಿತಾಮಹ |
| ಮರಣ | : | 28 ಸೆಪ್ಟೆಂಬರ್ 2023 |

ಮೇಲೆ ನೀಡಿದ ಮಾಹಿತಿಗಳ ಆಧಾರದಲ್ಲಿ ಡಾ. ಎಂ.ಎಸ್. ಸ್ವಾಮಿನಾಥನ್ ಅವರ ವ್ಯಕ್ತಿ ಪರಿಚಯ ಬರೆಯಿರಿ.

# ಸುಗ್ಗಿ ಕಾಲ ಹಿಗ್ಗಿ ಬಂದಿತೋ

ಸುಗ್ಗಿ ಕಾಲ ಹಿಗ್ಗಿ ಬಂದಿತೋ
ನಮ್ಮ ಬಾಳಿನಲ್ಲಿ ಭಾಗ್ಯ ತಂದಿತೋ
ಧಾನ್ಯದ ರಾಶಿಯ ಎಲ್ಲೆಡೆ ಚೆಲ್ಲುತ
ಭೂಮಿ ತಾಯಿ ಕಾಳು ಕೊಟ್ಟಳೋ
ನಮ್ಮ ಹೊಟ್ಟೆ ತುಂಬಾ ಅನ್ನವಿಟ್ಟಳೋ

ರಾಗಿಯ ಜೋಳದ ಭತ್ತದ ನವಣೆಯ
ತೊಗರಿ ಅವರೆಯ ರಾಶಿ ಹಾಕ್ಯಾವ್ರೆ ನೋಡಿ
ಉದ್ದು ಹೆಸರಿನ ರಾಶಿ ಮಾಡ್ಯಾವ್ರೆ
ಮುತ್ತು ಮುತ್ತು ಹೆಣೆದಂಥ ತೆನೆ ಚಂದ
ಕಂತೆ ಕಂತೆ ಕಟ್ಟಿನಿಂತ ಬಣವೆ ಅಂದ

ಕಾಳು ಕಾಳು ರಾಶಿ ಇವು ಎಂಥ ಚಂದ
ಆಳು ಉದ್ದ ರಾಶಿ ಇವು ನೋಡಲಂದ
ಬಳ್ಳ ತುಂಬಿ ಕೊಡುವ ಪಡಿದಾನ ಚಂದ
ನೋಡಿ ಬಳ್ಳ ತುಂಬಿ ಕೊಡುವ ಪಡಿದಾನ ಚಂದ

ಹಳ್ಳಿಯ ಹೈಕ್ಳೆಲ್ಲ ಹೋಳ್ಗಿಯ ಹೊರ್ಕೊಂಡು
ಕೊಳ್ಳಿಯ ಬೆಳಕಿನಲ್ಲಿ ಉಣ್ಣುತ್ತಾರೆ ನಮ್ಮ
ಹಳ್ಳಿಗೆ ಅನ್ನದಾನ ಮಾಡುತ್ತಾರೆ
ಘಲ್ಲು ಘಲ್ಲು ಗಜ್ಜೆಗೆ ತಕತಯ್ಯ ಹೆಜ್ಜೆಗೆ
ಮುತ್ತಿನ ಕೋಲುಗಳ ಹೊಯ್ಯುತ್ತಾರೆ
ತಿಂಗಳ ಬೆಳಕಲಿ ತಂಪಿನ ಹೊತ್ತಲಿ
ಹಂತಿಯ ಪದಗಳ ಹಾಡ್ಯಾವ್ರೆ
ಹಳ್ಳಿಗೆ ಸಂತಸ ತುಂಬುತ್ತಾರೆ

# ಕಲಿಕಾ ಕಣಜ



| ಕಲಿಕೋಪಕರಣಗಳು / ವೇದಿಕೆಗಳು | ಚಟುವಟಿಕೆಗಳು |
|---|---|
| ನೋಟು ಪುಸ್ತಕ | ಉತ್ತರ ಬರೆಯಿರಿ, ಪ್ರಾಸ ಪದಗಳು, ಜೋಡಿಸಿ ಬರೆಯುವ, ಕಂಡುಹಿಡಿಯುವ, ಕವಿತೆ ಮುಂದುವರಿಸುವ, ಯಾರು ಹೇಳಿದರು, ಸಂಗ್ರಹಿಸುವ, ಸರಿಯೋ ತಪ್ಪೋ, ಪ್ರಶ್ನೋತ್ತರ, ಸಂದರ್ಶನ, ವ್ಯಕ್ತಿ ಪರಿಚಯ, ವಾಕ್ಯ ರಚನೆ, ಒಗಟುಗಳಿಗೆ ಉತ್ತರಿಸಿರಿ, ಸರಿಪಡಿಸಿ ಬರೆಯಿರಿ. |
| ಪಠ್ಯಪುಸ್ತಕ | ಜೋಡಿಸಿ ಬರೆಯುವುದು, ಕವಿತೆ ಮುಂದುವರಿಸುವ, ಸರಿಯೋ ತಪ್ಪೋ, ಒಗಟುಗಳಿಗೆ ಉತ್ತರಿಸಿರಿ, ಸರಿಪಡಿಸಿ ಬರೆಯಿರಿ. |
| ದೃಶ್ಯಶ್ರಾವ್ಯ ಮಾಧ್ಯಮ | ರೈತ (ಪದ್ಯ), ಕೃಷಿಗೆ ಸಂಬಂಧಿಸಿದ ವೀಡಿಯೋ |
| ಭಿತ್ತಿಪತ್ರಿಕೆ | ರಚನೆಗಳು |
| ಪೋರ್ಟ್ ಫೋಲಿಯೋ | ರಚನೆಗಳು, ಆಲ್ಬಂ |
| ಬಾಲಸಭೆ/ ಶಾಲಾ ಎಸೆಂಬ್ಲಿ / ಸಿ.ಪಿ.ಟಿ.ಎ. | ಪಾಠಭಾಗದಲ್ಲಿರುವ ಪದ್ಯ, ಕಥೆ, ಉತ್ತಮ ರಚನೆಗಳು |

# 3. ಪ್ರಕೃತಿಯ ಮುನಿಸು

ಪ್ರಾಚೀನ ಕಾಲದಿಂದಲೇ ಮಾನವನು ಪ್ರಕೃತಿಯ ಆಶ್ರಯದಲ್ಲಿ ಇದ್ದುಕೊಂಡು ಪ್ರಕೃತಿಯನ್ನು ಮಾತೆಯಂತೆ ಪೂಜಿಸಿಕೊಂಡು ಬಂದಿದ್ದಾನೆ. ಕ್ರಮೇಣ ಅಭಿವೃದ್ಧಿಯ ನೆಪದಲ್ಲಿ ಪ್ರಕೃತಿಯನ್ನು ಅಳಿವಿನಂಚಿಗೆ ಒಯ್ದಿದ್ದಾನೆ. ಇದರ ಪರಿಣಾಮವಾಗಿ ಪ್ರಕೃತಿ ಮುನಿಸಿಕೊಂಡಿದೆ. ಪ್ರಕೃತಿ ವಿಕೋಪಕ್ಕೆ ಸಿಲುಕಿ ಮಾನವನು ತತ್ತರಿಸಿದ್ದಾನೆ. ಪರಿಸರದ ಮೇಲೆ ಮಾನವನ ಅತಿಕ್ರಮಣ ಅನಾಹುತಕ್ಕೆ ಕಾರಣವಾಗಿದೆ. ಪ್ರಕೃತಿಯ ಸಂರಕ್ಷಣೆ ನಮ್ಮ ಕರ್ತವ್ಯ ಎಂದು ಇನ್ನಾದರೂ ಅರಿಯಬೇಕಾಗಿದೆ.

**ಚಿತ್ರಗಳನ್ನು ಗಮನಿಸಿರಿ.**









ಈ ಚಿತ್ರಗಳಲ್ಲಿ ಕಂಡುಬರುವ ದೃಶ್ಯಗಳ ಕುರಿತು ಚರ್ಚಿಸಿರಿ.

# ಸುಂಟರಗಾಳಿ

ಏನಿದು ಧೂಳಿ ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ !
ತೆಂಗಿನ ಮರಗಳು, ಕಂಗಿನ ಮರಗಳು
ಬಾಳೆಯು, ತಾಳೆಯು, ಮಾವುಹಲಸುಗಳು
ಎಲ್ಲಾ ತೂಗಿವೆ ! ತಲೆಗಳ ಬಾಗಿವೆ !
ಏನಿದು ಧೂಳಿ ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ !
ಕಣ್ಣನು ಮುಚ್ಚಿ ಬಾಲವನೆತ್ತಿ
ದನ ಓಡುತ್ತಿದೆ, ಎತ್ತಲೋ ಸುತ್ತಿ
ಅಂಬಾ ಎನುತಿದೆ ಕರು ಬೆಂಬತ್ತಿ
ಏನಿದು ಧೂಳಿ ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ !



ಹೋಯಿತು ಹಂಚು ಹಾರಿತು ಹುಲ್ಲು
ಬೊಬ್ಬೆಯೆ ಬೊಬ್ಬೆಯು, ಭಯವೆಲ್ಲೆಲ್ಲು !
ಕೇಳುವರಾರೀ ಮಂದಿಯ ಗುಲ್ಲು?

ಏನಿದು ಧೂಳಿ ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ !

ಗಾಳಿಗೆ ಸಿಲುಕಿದನಾವನೋ ಮುದುಕ
ಕೊಡೆ ಹಾರಿತು, ಮೈ ಥರಥರ ನಡುಕ
ಕಣ್ಣೇ ಕಾಣದು ಹುಟ್ಟಿದೋ ಮರುಕ?

ಏನಿದು ಧೂಳಿ ಓಹೋ ಗಾಳಿ !
ಸುಳಿಯುತ ಬಂತೈ ಸುಂಟರಗಾಳಿ !

*ಕಯ್ಯಾರ ಕಿಞ್ಞಣ್ಣ ರೈ*

**(ಕಯ್ಯಾರ ಕಿಞ್ಞಣ್ಣ ರೈಯವರು ಕಾಸರಗೋಡು ತಾಲೂಕಿನ ಪೆರಡಾಲ ಗ್ರಾಮದಲ್ಲಿ 1915 ಜೂನ್ 8 ರಂದು ಜನಿಸಿದರು. ಇವರ ಕಾವ್ಯನಾಮ ದುರ್ಗಾದಾಸ. ಶತಮಾನದ ಗಾನ, ಶ್ರೀಮುಖ, ಪುನರ್ನವ ಇತ್ಯಾದಿ ಇವರ ಪ್ರಮುಖ ಕೃತಿಗಳಾಗಿವೆ. )**

## ಚಟುವಟಿಕೆಗಳು

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ಸುಂಟರಗಾಳಿಗೆ ಮರಗಿಡಗಳು ಏನಾದುವು?
2. ಸುಂಟರಗಾಳಿ ಹೇಗೆ ಬಂತು?
3. ಸುಂಟರಗಾಳಿಗೆ ದನ ಹೇಗೆ ಓಡಿತು?
4. ಎಲ್ಲೆಲ್ಲೂ ಭಯ ಉಂಟಾದುದು ಹೇಗೆ?
5. ಗಾಳಿಗೆ ಸಿಲುಕಿದ ಮುದುಕನಿಗೆ ಏನಾಯಿತು?

**ಪದ್ಯದಿಂದ ಪ್ರಾಸ ಪದಗಳನ್ನು ಆರಿಸಿ ಬರೆಯಿರಿ.**

| | |
|---|---|
| • | • |
| • | • |
| • | • |

## ಪದಗಳನ್ನು ಜೋಡಿಸಿ ಬರೆಯಿರಿ.

ಬಾಲವನು + ಎತ್ತಿ =

ಭಯ + ಎಲ್ಲೆಲ್ಲು =

ಸಿಲುಕಿದನು + ಆವನೊ =

## ಪರ್ಯಾಯ ಪದಗಳನ್ನು ಹೆಕ್ಕಿ ಬರೆಯಿರಿ.

ಭಯ ಮರ ದನ ಅಕ್ಷಿ
ಕಣ್ಣು ಗೋವು ವೃಕ್ಷ ಭೀತಿ ತರು ವಾಯು
ಗಾಳಿ ಹೆದರಿಕೆ ಮಾರುತ ಹಸು ನಯನ

- ಗಾಳಿ - ವಾಯು - ಮಾರುತ
- 

## ಅಕಾರಾದಿಯಾಗಿ ಬರೆಯಿರಿ.

ಧೂಳಿ, ಗಾಳಿ, ಸುಂಟರಗಾಳಿ, ಭಯ, ಹಲಸು, ಕಣ್ಣು, ತೆಂಗಿನಮರ, ಏನಿದು, ಥರಥರ, ಬೊಬ್ಬೆ, ದನಗಳು, ಅಂಬಾ.

## ಸುಂಟರಗಾಳಿ ಕವಿತೆಯ ಆಸ್ವಾದನ ಟಿಪ್ಪಣಿ ಬರೆಯಿರಿ.

## ಮಾದರಿಯಂತೆ ಕೆಳಗಿನ ಪದಗಳನ್ನು ವಾಕ್ಯದಲ್ಲಿ ಪ್ರಯೋಗಿಸಿರಿ.

- ಥರಥರ - ಚಳಿಗೆ ಮೈ ಥರಥರನೆ ನಡುಗಿತು.
- ಧಗಧಗ - ಬೆಂಕಿ ಧಗಧಗನೆ ಉರಿಯಿತು.
- ಫಳಫಳ -
- ಛಟಛಟ -
- ಜುಳುಜುಳು -
- ಸರಸರ -
- ಗಿರಗಿರ -



## ವಿವರಣೆ ಬರೆಯಿರಿ

ಸುಂಟರಗಾಳಿ ಬೀಸಿದಾಗ ಆ ಪ್ರದೇಶಗಳಲ್ಲಿ ಭಾರಿ ಅನಾಹುತಗಳು ಉಂಟಾಗುತ್ತವೆ. ಚಿತ್ರವನ್ನು ನೋಡಿ ವಿವರಣೆ ಬರೆಯಿರಿ.

..................................................................................................................................

..................................................................................................................................

..................................................................................................................................

..................................................................................................................................

..................................................................................................................................

..................................................................................................................................

..................................................................................................................................

# ಮಳೆ ಕಲಿಸಿದ ಪಾಠ

ಮೇಲಳ್ಳಿ ಮತ್ತು ಕೆಳಹಳ್ಳಿ ಎಂಬ ಎರಡು ಹಳ್ಳಿಗಳಿದ್ದವು. ಒಂದು ಗುಡ್ಡದ ಮೇಲೆ ಇರುವುದರಿಂದ ಅದು ಮೇಲಳ್ಳಿ ಎಂದೂ ಇನ್ನೊಂದು ಆ ಗುಡ್ಡದ ಕೆಳಗೆ ಇರುವುದರಿಂದ ಕೆಳಹಳ್ಳಿ ಎಂದೂ ಕರೆಸಿಕೊಂಡಿತ್ತು. ಮೇಲಳ್ಳಿಯ ಜನರಿಗೂ ಕೆಳಹಳ್ಳಿಯ ಜನರಿಗೂ ಪರಸ್ಪರ ಕಂಡರೆ ಆಗುತ್ತಿರಲಿಲ್ಲ. ಅವರು ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದರು. ಸಣ್ಣಪುಟ್ಟ ಕಾರಣಗಳಿಗೆ ಕಾಲು ಕೆರೆದುಕೊಂಡು ಜಗಳ ಮಾಡುತ್ತಿದ್ದರು. ಮೇಲಳ್ಳಿಯಿಂದ ಕೊಚ್ಚೆ ನೀರು ನಮ್ಮ ಹಳ್ಳಿಗೆ ಬಂತು ಅಂತ ಕೆಳಹಳ್ಳಿಯವರು ಜಗಳ ಮಾಡಿದರೆ, ನಿಮ್ಮ ಮನೆಗಳ ಹೊಗೆ ನಮ್ಮ ಹಳ್ಳಿಗೆ ಬಂತು, ನಮ್ಮ ಆರೋಗ್ಯವನ್ನೆಲ್ಲ ಕೆಡಿಸಿತು ಅಂತ ಮೇಲಳ್ಳಿಯವರು ಆರೋಪ ಮಾಡುತ್ತಿದ್ದರು.

ಹೀಗಿರಲು ಒಮ್ಮೆ ಬಾನಿನಲ್ಲಿ ದಟ್ಟವಾದ ಮೋಡ ಕಾಣಿಸಿಕೊಂಡಿತು. ಭಾರೀ ಮಳೆಯಾಗುವ ಸಂಭವವಿದೆ ಎಂದು ಹಳ್ಳಿಯವರು ಅಂದುಕೊಂಡರು. "ಮಳೆ ಎಷ್ಟು ಬೇಕಾದರೂ ಬರಲಿ, ನಮಗೇನಂತೆ? ಪ್ರವಾಹ ಹರಿಯುವುದು ಕೆಳಕ್ಕೆ ತಾನೆ; ನಾವಂತೂ ಕ್ಷೇಮ" ಎಂದು ಮೇಲಳ್ಳಿಯವರು ಅಂದುಕೊಂಡರು.



"ಭಾರೀ ಮಳೆ ಬಂದರೆ ನಮಗೆ ಅಪಾಯ ತಪ್ಪಿದ್ದಲ್ಲ" ಎಂದು ಕೆಳಹಳ್ಳಿಯವರು ಚಿಂತಿಸಿದರು. ಆಗಸದತ್ತ ನೋಡಿದರೆ ಮಳೆ ದಿನಗಟ್ಟಲೆ ಸುರಿಯುವ ಸೂಚನೆ ಕಂಡುಬಂದಿತು.

ಕೆಳಹಳ್ಳಿಯ ಪ್ರಮುಖನಿಗೆ ಚಿಂತೆಯಾಯಿತು. ತಮ್ಮ ಹಳ್ಳಿ ಕೆಳಗಿರುವುದರಿಂದ ಭಾರೀ ಮಳೆಯಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂದು ತಮ್ಮವರನ್ನು ಕೇಳಿದನು. ಅತ್ತ ಮೇಲಳ್ಳಿಯ ಮುಖಂಡನೂ ತಮ್ಮವರನ್ನು ಕರೆದು ಸಭೆ ನಡೆಸಿದನು. ಆಕಾಶದಿಂದ ಬೀಳುವ ಒಂದು ಹನಿಯನ್ನೂ ದಂಡ ಮಾಡದೆ ಎಲ್ಲಾ ನೀರನ್ನು ಕೆಳಹಳ್ಳಿಗೆ ಹಾಯಿಸಬೇಕೆಂದು ತಾಕೀತು ಮಾಡಿದನು. ಇತ್ತ ಕೆಳಹಳ್ಳಿಯವರು ಒಂದು ಉಪಾಯ ಹೂಡಿದರು. ಮೇಲಳ್ಳಿಗೂ ಕೆಳಹಳ್ಳಿಗೂ ಮಧ್ಯೆ ಇರುವ ಬೇಲಿಯ ಜಾಗದಲ್ಲಿ ಎತ್ತರವಾದ ಅಡ್ಡ ಗೋಡೆಯನ್ನು ಕಟ್ಟಿ ಬಿಡುವುದು.



ಮೇಲಿನಿಂದ ಒಂದು ಹನಿ ನೀರೂ ಕೆಳಗೆ ಬಾರದಂತೆ ಗೋಡೆ ಕಟ್ಟಿದರೆ ಮಳೆಯ ನೀರೆಲ್ಲ ಮೇಲಳ್ಳಿಯಲ್ಲಿಯೇ ಶೇಖರವಾಗಿ ಅವರಿಗೆ ಹಾನಿಯಾಗುತ್ತದೆ ಎಂದು ತೀರ್ಮಾನಿಸಿದರು.

ರಾತ್ರೋರಾತ್ರಿ ಕೆಳಹಳ್ಳಿಯವರು ಗೋಡೆ ಕಟ್ಟುವ ಸಾಮಾನುಗಳನ್ನೆಲ್ಲ ಸಂಗ್ರಹಿಸಿದರು. ಆ ರಾತ್ರಿಯಲ್ಲೆ ತಾವು ನಿಶ್ಚಯಿಸಿದ್ದಂತೆ ಮೇಲಳ್ಳಿಯ ನಾಲ್ಕು ಕಡೆಗಳಿಂದ ಒಂದೇ ಬಾರಿಗೆ ಗೋಡೆ ಎಬ್ಬಿಸಿದರು. ಒಂದು ಹನಿ ನೀರೂ ಬಾರದಂತೆ ಎಚ್ಚರವಹಿಸಿದರು. ಬೆಳಗಿನ ಜಾವದವರೆಗೂ ಕೆಲಸ ಮಾಡಿದರು. ಎರಡು ಹಳ್ಳಿಯ ನಡುವೆ ಇದ್ದ ಸಂಪರ್ಕ ದಾರಿಯನ್ನು ಮುಚ್ಚಿ ಬಿಟ್ಟರು. ಕೆಳಹಳ್ಳಿಯವರು ತಮ್ಮ ಗೋಡೆ ಕಟ್ಟುವ ಕೆಲಸ ಮುಗಿಸುವ ಹೊತ್ತಿಗೆ ಧೋ ಎಂದು ಮಳೆ ಸುರಿಯಲು ಆರಂಭವಾಯಿತು. ಅವಸರ ಅವಸರವಾಗಿ ಕೆಳಹಳ್ಳಿಯವರು ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡರು.

ಧಾರಾಕಾರವಾಗಿ ಸುರಿದ ಮಳೆಗೆ ಮೇಲಳ್ಳಿಯ ತಗ್ಗು ಪ್ರದೇಶಗಳಿಗೆಲ್ಲ ನೀರು ನುಗ್ಗಿತು. ಮಳೆ ಇನ್ನೂ ಸುರಿಯುತ್ತಲೇ ಇತ್ತು. ಎದ್ದೆವೊ ಬಿದ್ದೆವೊ ಎಂದು ಜನ ತಮ್ಮ ವಸ್ತುಗಳನ್ನೆಲ್ಲ ಕಟ್ಟಿಕೊಂಡು ಇನ್ನೂ ಎತ್ತರದ ಪ್ರದೇಶಕ್ಕೆ ಓಡಿದರು. ಕ್ಷಣ ಕ್ಷಣಕ್ಕೂ ನೀರಿನ ಮಟ್ಟ ಮೇಲೇರುತ್ತಿತ್ತು. ನೀರು ಮೇಲೇರುತ್ತಿರುವ ಕಾರಣವು ಯಾರಿಗೂ ಹೊಳೆಯಲೇ ಇಲ್ಲ. ಮಳೆಗೆ ಮೇಲಳ್ಳಿಯ ತಗ್ಗಿನ ಪ್ರದೇಶಗಳ ಮನೆಗಳೆಲ್ಲ ಕುಸಿದವು. ಗೋಡೆಗಳು ಬಿದ್ದ ರಭಸಕ್ಕೆ ಪ್ರಾಣಕ್ಕೂ ಹಾನಿಯಾಯಿತು. ಎಲ್ಲೆಲ್ಲೂ ಅಸಹಾಯಕ ಜನರ ಮೊರೆಯು ಕೇಳಿಸಿತು. ಮೇಲಳ್ಳಿಯ ಜನರ ಚೀತ್ಕಾರದ ದನಿಯನ್ನು ಕೇಳಿ ಕೆಳಹಳ್ಳಿಯವರು ತಮ್ಮ ತಮ್ಮಲ್ಲೆ ಹರ್ಷಗೊಂಡರು. ಮೇಲಳ್ಳಿಯ ಸಾಕಷ್ಟು ಮಂದಿ ಪ್ರಾಣ ಕಳೆದುಕೊಂಡರು. ಜಾನುವಾರುಗಳು ಇಹಲೋಕವನ್ನು ತ್ಯಜಿಸಿದವು. ಜನರ ಚೀತ್ಕಾರ, ಆಕ್ರಂದನ, ಕೂಗಾಟ ಕೇಳಿ ಬರುತ್ತಿತ್ತು. ಕೆಳಹಳ್ಳಿಯ ಕೆಲವರು ಮಳೆಯಲ್ಲಿಯೇ ತಾವು ಕಟ್ಟಿದ ಗೋಡೆಯ ಬಳಿಗೆ ಹೋಗಿ ಎಲ್ಲವೂ ಸರಿ ಇದೆಯೇ ಎಂದು ಖಾತರಿಪಡಿಸಿಕೊಂಡರು.

ರಾತ್ರಿ ಹನ್ನೆರಡು ಗಂಟೆಯಾಗಿತ್ತು. ಮೇಲಳ್ಳಿಯವರು ನೋವಿನಿಂದ ನರಳುತ್ತಿದ್ದರು. ಕೆಳಹಳ್ಳಿಯವರು ನೆಮ್ಮದಿಯಿಂದ ನಿದ್ದೆ ಮಾಡುತ್ತಿದ್ದರು. ಆದರೆ ಗೋಡೆಯ ಒಂದು ಬದಿಯಲ್ಲಿ ಬಿರುಕು ಮೂಡಿತು. ನೀರಿನ ಒತ್ತಡಕ್ಕೆ ಗೋಡೆ ಕುಸಿಯಿತು. ಸಂಗ್ರಹವಾಗಿದ್ದ ನೀರೆಲ್ಲ ಒಮ್ಮಿಂದೊಮ್ಮೆಗೆ ರಭಸದಿಂದ ಕೆಳಗೆ ಹರಿಯಿತು. ನೀರಿನ ಪ್ರವಾಹಕ್ಕೆ ತಗ್ಗು ಪ್ರದೇಶವೆಲ್ಲ ತುಂಬಿತು. ನೀರು ತನ್ನ ಹಾದಿಯಲ್ಲಿ ಸಿಕ್ಕಿದ್ದೆಲ್ಲವನ್ನು ಕೊಚ್ಚಿಕೊಂಡು ಹೋಯಿತು. ಕೆಳಹಳ್ಳಿಯವರು ಇನ್ನೂ ನಿದ್ದೆಯಲ್ಲಿದ್ದಾಗಲೇ ನೀರಿನ ರಭಸಕ್ಕೆ ಸಿಕ್ಕಿ ಕಕ್ಕಾಬಿಕ್ಕಿಯಾದರು. ಏನೆಂದು ಅರಿಯುವ ಮೊದಲೇ ಭಾರೀ ಹಾನಿಯಾಗಿತ್ತು. ಮೇಲಳ್ಳಿ, ಕೆಳಹಳ್ಳಿ ಎನ್ನದೆ ಮಳೆರಾಯ ಎರಡೂ ಹಳ್ಳಿಗಳ ಹೆಣಗಳನ್ನು ಒಟ್ಟುಗೂಡಿಸಿದ್ದ.

**ಮತ್ತೂರು ಸುಬ್ಬಣ್ಣ**

ಹೊಸಹಳ್ಳಿ ಬಾಲ ಸುಬ್ರಹ್ಮಣ್ಯರವರು ಮತ್ತೂರು ಸುಬ್ಬಣ್ಣ ಎಂದೇ ಚಿರಪರಿಚಿತರು. ಇವರು ಮಕ್ಕಳ ಕಥೆ, ಕವನ, ನಾಟಕ ರಚನೆಯಲ್ಲೂ, ಮಕ್ಕಳ ಕಥೆ ಹೇಳುವುದರಲ್ಲಿಯೂ ಸಿದ್ಧಹಸ್ತರು. ಸುಬ್ಬಣ್ಣನವರು ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲ ಕೇಂದ್ರೀಯ ವಿದ್ಯಾಲಯದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿರುವರು.

## ಚಟುವಟಿಕೆಗಳು

### ಉತ್ತರಿಸಿರಿ.

1. ಮೇಲಳ್ಳಿ ಮತ್ತು ಕೆಳಹಳ್ಳಿಯವರು ಪರಸ್ಪರ ಆರೋಪ ಮಾಡುತ್ತಿದ್ದುದು ಯಾಕೆ?
2. ಮೇಲಳ್ಳಿಯ ಮುಖಂಡನು ತಮ್ಮವರನ್ನು ಕರೆದು ಏನೆಂದು ತಾಕೀತು ಮಾಡಿದನು?
3. ಕೆಳಹಳ್ಳಿಯವರು ಎತ್ತರವಾದ ಅಡ್ಡಗೋಡೆಯನ್ನು ಎಲ್ಲಿ ಕಟ್ಟಲು ತೀರ್ಮಾನಿಸಿದರು?
4. ಕೆಳಹಳ್ಳಿಯವರು ಮೇಲಳ್ಳಿಯ ಸುತ್ತ ಗೋಡೆ ಕಟ್ಟಿದ ಬಗೆ ಹೇಗೆ?
5. ಗೋಡೆಯಲ್ಲಿ ಬಿರುಕು ಮೂಡಿದಾಗ ಕೆಳಹಳ್ಳಿಗೆ ಏನು ಸಂಭವಿಸಿತು?

### ಸಜಾತೀಯ ಒತ್ತಕ್ಷರ ಪದಗಳನ್ನು ಪಾಠದಿಂದ ಹುಡುಕಿ ಬರೆಯಿರಿ.

ಉದಾ : ಮೇಲಳ್ಳಿ

### ಬಿಟ್ಟ ಸ್ಥಳವನ್ನು ತುಂಬಿಸಿರಿ.

| | | | | |
|---|---|---|---|---|
| ಕಪ್ಪು | + | ..................... | = | ಕಪ್ಪಾಯಿತು |
| ಮಳೆ | + | ..................... | = | ಮಳೆಯಾಗುವ |
| ಇನ್ನು | + | ..................... | = | ಇನ್ನೆರಡು |
| ಗುಟ್ಟು | + | ..................... | = | ಗುಟ್ಟಾಗಿ |
| ಯೋಜನೆ | + | ..................... | = | ಯೋಜನೆಯಿಂದ |

## ವಿರೋಧಾರ್ಥ ಪದ ಬರೆಯಿರಿ.

ದ್ವೇಷ x

ಎತ್ತರ x

ಅಸಹಾಯಕ x

ರಭಸ x

ಭದ್ರ x

## ವಾಕ್ಯ ರಚಿಸಿರಿ

- ತೀರ್ಮಾನಿಸು -
- ಅಪಾಯ -
- ಪ್ರವಾಹ -
- ಧಾರಾಕಾರ -
- ಚೀತ್ಕಾರ -

## ಅನುಭವ ಟಿಪ್ಪಣಿ

ಮಳೆಗಾಲವೆಂದರೆ ನಿಮಗೆಲ್ಲರಿಗೂ ಇಷ್ಟವಲ್ಲವೇ? ಮಳೆಗಾಲದ ಮರೆಯಲಾಗದ ನಿಮ್ಮ ಒಂದು ಅನುಭವವನ್ನು ಟಿಪ್ಪಣಿಯಾಗಿ ಬರೆಯಿರಿ.

## ರಜೆ ಅರ್ಜಿ

ನೀವು ತರಗತಿಗೆ ಗೈರು ಹಾಜರಾದರೆ ರಜೆ ಅರ್ಜಿ ಬರೆಯುತ್ತೀರಲ್ಲವೇ? ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಗೈರುಹಾಜರಾದುದಕ್ಕೆ ಒಂದು ರಜೆ ಅರ್ಜಿಯನ್ನು ಬರೆಯಿರಿ.

## ಚರ್ಚಿಸಿರಿ

ಮೇಲಳ್ಳಿ ಮತ್ತು ಕೆಳಹಳ್ಳಿಯ ಜನರ ನಡುವೆ ನಡೆದ ಜಗಳದಲ್ಲಿ ಯಾರು ಗೆದ್ದರು? ಯಾರು ಸೋತರು? ಎಂದು ತರಗತಿಯಲ್ಲಿ ಚರ್ಚಿಸಿರಿ.

## ಕೊಟ್ಟಿರುವ ಕಥಾಭಾಗವನ್ನು ಮುಂದುವರಿಸಿ ಬರೆದು ಕೋಣೆಯೊಳಗೆ ಸೂಕ್ತವಾದ ಶೀರ್ಷಿಕೆ ಬರೆಯಿರಿ.

| |
|---|
| |

ಮಂಜುವಿನ ಮನೆ ತಪಸ್ಯ ನದಿಯ ತೀರದಲ್ಲಿತ್ತು. ಅವನು ತನ್ನ ತಂದೆತಾಯಿ ಮತ್ತು ತಂಗಿಯ ಜೊತೆಗೆ ಸಂತಸದಿಂದ ಜೀವನ ಸಾಗಿಸುತ್ತಿದ್ದನು. ಅವನಿಗೆ ಪಾರಿವಾಳಗಳೆಂದರೆ ತುಂಬಾ ಪ್ರೀತಿ. ನಾಲ್ಕೈದು ಪಾರಿವಾಳಗಳನ್ನು ಸಾಕಿದ್ದನು. ಅವುಗಳು ಪ್ರತಿದಿನ ಬೆಳಗ್ಗಿನಿಂದ ಸಂಜೆಯವರೆಗೆ ಕಾಡಿನಲ್ಲಿ ವಿಹರಿಸಿ ಅವನು ಮಾಡಿಟ್ಟ ಮರದ ಪೆಟ್ಟಿಗೆಯಲ್ಲಿ ವಿಶ್ರಮಿಸುತ್ತಿದ್ದವು. ಹೀಗಿರಲು ಮಳೆಗಾಲದ ಒಂದು ರಾತ್ರಿ ಭಾರೀ ಮಳೆ ಸುರಿಯಿತು. ನದಿಯ ನೀರು ಅಂಗಳಕ್ಕೆ ನುಗ್ಗಿತು. ಪಾರಿವಾಳಗಳು ವಿಚಿತ್ರ ಸದ್ದಿನಿಂದ ಕೂಗತೊಡಗಿದವು.

## ಗದ್ಯಭಾಗವನ್ನು ಓದಿ ನಾಮಪದ - ಕ್ರಿಯಾಪದಗಳನ್ನು ಪಟ್ಟಿ ಮಾಡಿರಿ

ರಿಶಾನ ಮತ್ತು ಜಿಶಾ ತಮ್ಮ ಮನೆಯವರೊಂದಿಗೆ ಕಾಸರಗೋಡಿನ ಬೇಕಲ ಕೋಟೆಗೆ ಪ್ರವಾಸ ಹೋದರು. ಕೋಟೆಯ ಒಳಗೆ ಅಂದದ ಹೂವುಗಳು, ಬಗೆ ಬಗೆಯ ಗಿಡಗಳು ಇರುವ ಉದ್ಯಾನವನ್ನು ಕಂಡರು. ಕೋಟೆಯ ಬುರುಜನ್ನು ಏರಿದರು. ಅರಬಿ ಸಮುದ್ರದ ಸೌಂದರ್ಯವನ್ನು ಕಣ್ ತುಂಬಿದರು. ಕೋಟೆಯಿಂದ ಇಳಿದು ಸಮುದ್ರ ತೀರಕ್ಕೆ ನಡೆದರು. ಅಲ್ಲಿ ಮಕ್ಕಳು ಮರಳಿನಲ್ಲಿ ಆಟವಾಡುತ್ತಿದ್ದರು. ಕೆಲವರು ನೀರಿನಲ್ಲಿ ಈಜುತ್ತಿದ್ದರು. ರಿಶಾನ ಮತ್ತು ಜಿಶಾ ನೀರಿನಲ್ಲಿ ಕುಣಿದು ಕುಪ್ಪಳಿಸಿದರು. ಸಂಜೆ ಮನೆಗೆ ಹಿಂತಿರುಗಿದರು.

| ನಾಮಪದ | ಕ್ರಿಯಾಪದ |
|---|---|
| | |

## ನಾಲಿಗೆ ಸುರುಳಿ

ಮೇಲಳ್ಳಿ ಕೆಳಹಳ್ಳಿ ಎಂದು ವೇಗವಾಗಿ ಹೇಳಿರಿ. ಇದೇ ರೀತಿ ಕೆಳಗೆ ನೀಡಿರುವ ನಾಲಿಗೆ ಸುರುಳಿಯನ್ನು ಓದಿರಿ.

- ಎತ್ತೆರಡೆಮ್ಮೆರಡು ಆಡೆರಡು ಆಡಿಗೆ ಕೋಡೆರಡು
- ಕಡಲೆಕಾಳು ಕಾಲ ಕೆಳಗೆ ಉರುಳಿ ಉರುಳಿ ಹೋಯಿತು
- ಗಿಡತಳಿರೊಡೆದೆರಡೆಲೆಯಾಯಿತು

# ಬೆಟ್ಟದ ಕಟ್ಟೆ ಒಡೆದಾಗ....

ಕೇರಳದ ವಯನಾಡು ಜಿಲ್ಲೆಯು ಕಲಾವಿದನ ಕುಂಚದಲ್ಲಿ ಅರಳಿದ ಚಿತ್ರದಂತೆ ಶೋಭಿಸುವ ಪ್ರಕೃತಿ ರಮಣೀಯ ಪ್ರದೇಶವಾಗಿದೆ. ಈ ಜಿಲ್ಲೆಯ ಮುಂಡಕ್ಕೈಮತ್ತು ಚೂರಲ್ ಮಲೆ ಎಂಬ ಗ್ರಾಮಗಳು ಭೂಮಿಯ ಮೇಲಿನ ಸ್ವರ್ಗದಂತೆ ಕಂಗೊಳಿಸುತ್ತಿದ್ದವು. ಆದರೆ 2024 ಜುಲೈತಿಂಗಳ ಮಧ್ಯರಾತ್ರಿಯಲ್ಲಿನಡೆದ ದುರಂತದಿಂದ ಮುಂಡಕ್ಕೈಮತ್ತು ಚೂರಲ್ ಮಲೆ ಎಂಬ ಎರಡು ಗ್ರಾಮಗಳು ಸರ್ವನಾಶವಾದವು.

ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಎತ್ತರವಾದ ಪ್ರದೇಶದಲ್ಲಿ ಭೂಕುಸಿತವುಂಟಾಗಿ ಬೃಹತ್ ಬಂಡೆಗಳು ಉರುಳಿ ಬಂದಿದ್ದುವು. ಕಟ್ಟಡ, ಮನೆ, ಶಾಲೆ, ಗಿಡ, ಮರಗಳೆಲ್ಲವೂ ಮಹಾಪ್ರವಾಹಕ್ಕೆ ಸಿಲುಕಿ ನಾಶವಾದವು. ಪ್ರಕೃತಿಯ ರೌದ್ರನರ್ತನದಿಂದಾಗಿ ಸ್ವರ್ಗಸಮಾನವಾದ ಭೂಮಿಯೊಂದು ನರಕಸದೃಶವಾಯಿತು. ಅನೇಕರು ಪ್ರಾಣ ಕಳೆದುಕೊಂಡರು. ಹೆಬ್ಬಂಡೆ ಮತ್ತು ಮಣ್ಣಿನಡಿಯಲ್ಲಿ ಸಿಲುಕಿದ ಮನುಷ್ಯರನ್ನು ಹಾಗೂ ಪ್ರಾಣಿಗಳನ್ನು ರಕ್ಷಿಸುವ ಕಾರ್ಯವು ಭರದಿಂದ ನಡೆಯಿತು. ಆದರೆ ಅದಾಗಲೇ ಹಲವು ರೀತಿಯ ಪ್ರಾಣಹಾನಿಗಳು ಆಗಿದ್ದುವು.

ದಿನ ಬೆಳಗಾಗುವುದರೊಳಗೆ ತಮ್ಮ ಸುಂದರ ಬದುಕನ್ನು ಕಳೆದುಕೊಂಡು, ಕಂಗೆಟ್ಟು ನಿರಾಶ್ರಿತರ ಶಿಬಿರದಲ್ಲಿ ಕುಳಿತ ಸಂತ್ರಸ್ತರನ್ನು ಕಾಣುವಾಗ ಎಂತಹ ಕಲ್ಲೆದೆಯೂ ಕರಗುವಂತಿತ್ತು. ಪ್ರಕೃತಿಯ ಮುನಿಸಿನ ಭೀಕರತೆಯನ್ನು ಈ ದುರಂತದಿಂದ ತಿಳಿಯಬಹುದಾಗಿತ್ತು. ಅಲ್ಲಿನ ಸಂತ್ರಸ್ತರ ಸಹಾಯಕ್ಕಾಗಿ ಭಾರತೀಯ ಸೇನೆ, ಅಗ್ನಿಶಾಮಕ





ದಳ, ಅರಣ್ಯ ಇಲಾಖೆ, ಸೇವಾ ಸಂಸ್ಥೆಗಳು ಹಾಗೂ ಹಲವು ಸಂಘಟನೆಗಳು ರಕ್ಷಣಾ ಕಾರ್ಯದಲ್ಲಿ ತೊಡಗಿದುವು. ತಿಂಗಳುಕಾಲ ಈ ಕಾರ್ಯಾಚರಣೆಯು ನಡೆಯಿತು. ಹಲವು ಕಡೆಗಳಿಂದ ಮಾನವೀಯ ನೆಲೆಯ ಸಹಾಯಗಳು ಲಭಿಸಿದುವು.

ವರ್ಷಗಳ ಹಿಂದೆ ವಯನಾಡಿನ ವೆಳ್ಳಾರ್‌ಮಲೆ ಶಾಲೆಯ ಡಿಜಿಟಲ್ ಮ್ಯಾಗಜಿನ್ ನಲ್ಲಿ ವಿದ್ಯಾರ್ಥಿಗಳು ತಮ್ಮ ತಾಯ್ನಾಡಿನ ಪ್ರಕೃತಿಯನ್ನು ವರ್ಣಿಸಿ ಬರೆದ ರಚನೆಗಳಿದ್ದವು. ಅದರಲ್ಲಿ ಒಂದೆಡೆ ಜಲಪಾತದ ಸೌಂದರ್ಯವನ್ನು ಆಸ್ವಾದಿಸುತ್ತಿರುವ ಮಕ್ಕಳ ಬಳಿ ಬಂದ ಗಿಳಿಯೊಂದು "ಇಲ್ಲಿಂದ ಬೇಗ ಹೊರಡಿ, ಶೀಘ್ರದಲ್ಲಿ ದೊಡ್ಡ ದುರಂತವೊಂದು ಬರಲಿದೆ. ಭೋರ್ಗರೆದು ಬರುವ ಮಳೆಪ್ರವಾಹದಿಂದ ರಕ್ಷಣೆ ಪಡೆಯಲು ಸುರಕ್ಷಿತ ಜಾಗಕ್ಕೆ ತೆರಳಿ" ಎಂದು ಎಚ್ಚರಿಸುವ ಸನ್ನಿವೇಶವಿದೆ. ಆ ಮುನ್ಸೂಚನೆ ನಿಜವಾಯಿತು. ಮುಂಡಕ್ಕೈ ಮತ್ತು ಚೂರಲ್ ಮಲೆ ಎಂಬ ಗ್ರಾಮಗಳು ಇತಿಹಾಸದ ಪುಟಕ್ಕೆ ಸೇರಿ ಹೋದುವು.

ಪ್ರಕೃತಿ ವಿಕೋಪಗಳ ಹಿನ್ನೆಲೆಯನ್ನು ಗಮನಿಸಿದಾಗ ಅಭಿವೃದ್ಧಿಯ ಹೆಸರಿನಲ್ಲಿ ನಿರಂತರವಾಗಿ ನಡೆಯುತ್ತಿರುವ ಗಣಿಗಾರಿಕೆ, ರಸ್ತೆ ಅಭಿವೃದ್ಧಿ, ಕೈಗಾರಿಕೆ ಮತ್ತು ಪ್ರವಾಸೋದ್ಯಮ ಚಟುವಟಿಕೆಗಳು ಪಶ್ಚಿಮಘಟ್ಟವನ್ನು ವಿಕೋಪಗಳ ಕೂಪವನ್ನಾಗಿಸಿದೆ. ಮಾನವನು ಗುಡ್ಡಗಾಡುಗಳನ್ನು, ಅರಣ್ಯಗಳನ್ನು ತನ್ನ ಲಾಲಸೆಯ ತೊಟ್ಟಿಲಾಗಿ ಪರಿವರ್ತಿಸಿದುದರಿಂದ ಇಂತಹ ದುರಂತಗಳು ಉಂಟಾಗುತ್ತಿವೆ.

ನಮ್ಮ ಪೂರ್ವಜರು ಪ್ರಕೃತಿಯನ್ನು ಭಯ, ಭಕ್ತಿಯಿಂದ ಗೌರವಿಸುತ್ತಿದ್ದರು. ಪ್ರಕೃತಿಗೆ ವಿರುದ್ಧವಾದ ಯಾವುದೇ ಚಟುವಟಿಕೆಗಳನ್ನು ಅವರು ಮಾಡುತ್ತಿರಲಿಲ್ಲ. ನಮ್ಮ ಸ್ವಾರ್ಥಕ್ಕಾಗಿ ನಾವಿಂದು ಪ್ರಕೃತಿಯ ಮೇಲೆ ದೌರ್ಜನ್ಯವೆಸಗುತ್ತಿದ್ದೇವೆ. ಇದನ್ನು ಕೈಬಿಡಬೇಕು. 'ಪರಿಸರ ಸಂರಕ್ಷಣೆ'ಯು ನಮ್ಮ ಧ್ಯೇಯವಾಗಿರಬೇಕು. 'ಪ್ರಕೃತಿಯ ಸಿರಿ ನಮ್ಮ ಪಾಲಿನ ವರ' ಎಂಬ ಸತ್ಯಾಂಶವನ್ನು ಅರಿತು ಬಾಳಬೇಕು.

*(ಸಂಗ್ರಹ)*

## ಚಟುವಟಿಕೆಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. 2024 ರ ಜುಲೈ ತಿಂಗಳ ಮಧ್ಯರಾತ್ರಿ ವಯನಾಡಿನಲ್ಲಿ ಏನು ಸಂಭವಿಸಿತು?
2. ಗಿಳಿಯು ಮಕ್ಕಳಿಗೆ ನೀಡಿದ ಮುನ್ಸೂಚನೆಯೇನು?
3. ಪಶ್ಚಿಮ ಘಟ್ಟಗಳು ವಿಕೋಪಗಳ ಕೂಪವಾಗಲು ಕಾರಣವಾದ ಮಾನವನ ಚಟುವಟಿಕೆಗಳು ಯಾವುವು?
4. ನಾವು ಪ್ರಕೃತಿಯ ಬಗ್ಗೆ ಅರಿಯಬೇಕಾದ ಸತ್ಯಾಂಶವೇನು?

### ಪದಗಳನ್ನು ವಿಂಗಡಿಸಿ ಬರೆಯಿರಿ

- ಶಾಂತವಾಗಿ -
- ಅದರೆದುರು -
- ಅದಾಗಿತ್ತು -
- ದುರಂತವೊಂದು -
- ಸಾಧ್ಯವಾಗಿಲ್ಲ -
- ಮಣ್ಣಾಗಿದ್ದಾನೆ -

### ವಿಜಾತೀಯ ಒತ್ತಕ್ಷರ ಪದಗಳನ್ನು ಪಾಠ ಭಾಗದಿಂದ ಪಟ್ಟಿ ಮಾಡಿರಿ.

ಉದಾ : ಚಿತ್ರ

### ಬಹುವಚನ ಪದ ಬರೆಯಿರಿ

ಗ್ರಾಮ -
ಜನ -
ಮನೆ -
ಕಟ್ಟಡ -
ಅವಶೇಷ -
ಪ್ರಕೃತಿ -
ನೀರು -

ಪತ್ರಿಕಾ ವರದಿಗೆ ಸಂಬಂಧಿಸಿದ ಕೊಲಾಶನ್ನು ಗಮನಿಸಿರಿ. ಇದರಲ್ಲಿರುವ ಶೀರ್ಷಿಕೆಗಳನ್ನು ಪಟ್ಟಿ ಮಾಡಿರಿ.




- 
- 
- 
- 

ನಿಮಗೆ ತಿಳಿದಿರುವ ಯಾವುದಾದರೊಂದು ದುರಂತದ ಕುರಿತು ಪತ್ರಿಕಾ ವರದಿ ಬರೆಯಿರಿ.

ಪತ್ರಿಕಾ ವರದಿಗಳನ್ನು ಸಂಗ್ರಹಿಸಿ ಕೊಲಾಶ್ ತಯಾರಿಸಿ ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಿರಿ.

## ಅಡಿ ಟಿಪ್ಪಣಿ ಬರೆಯಿರಿ




## ಘೋಷಣಾ ವಾಕ್ಯ ರಚಿಸುವ

"ಭೂಮಿ ಮನುಷ್ಯನ ಆಸೆಗಳನ್ನು ಪೂರೈಸಬಲ್ಲದು. ಆದರೆ ದುರಾಸೆಗಳನ್ನಲ್ಲ' ಮಹಾತ್ಮ ಗಾಂಧೀಜಿಯವರು ಆಡಿದ ಈ ಮಾತುಗಳು ಎಷ್ಟೊಂದು ನಿಜವಲ್ಲವೇ? ಅಭಿವೃದ್ಧಿಯ ಹೆಸರಿನಲ್ಲಿ ಮಾನವನ ಚಟುವಟಿಕೆಗಳಿಂದ ಪ್ರಕೃತಿಯನ್ನು ರಕ್ಷಿಸಬೇಕು. ಪ್ರಕೃತಿಯ ಸಂರಕ್ಷಣೆ ನಮ್ಮ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ಜನ ಜಾಗೃತಿ ಮೂಡಿಸಲು ಘೋಷಣಾ ವಾಕ್ಯಗಳನ್ನು ರಚಿಸಿರಿ.

ಪ್ರಕೃತಿ ಸಂರಕ್ಷಣೆ ನಮ್ಮೆಲ್ಲರ ಹೊಣೆ

## ಪದ್ಯ ಪೂರ್ತಿಗೊಳಿಸಿ ಶೀರ್ಷಿಕೆ ನೀಡಿರಿ

| |
|---|
| |

ಗಿಡಗಳು ಮರಗಳು
ಭುವಿಯಲಿ ಬೆಳೆಯಲಿ
ಅಂದದ ಪ್ರಕೃತಿಯು
ಚೆಂದದಿ ಉಳಿಯಲಿ

................................

................................

..............................

..............................

................................

................................

..............................

..............................

ಗುಡ್ಡವು ಬೆಟ್ಟವು
ಇಳೆಯಲಿ ಇರಲಿ
ಸಕಲ ಜೀವಕೆ
ಆಸರೆಯಾಗಲಿ

## ಪದಬಂಡಿಯಲ್ಲಿ ಬಿಟ್ಟುಹೋದ ಪದವನ್ನು ಪಾಠಭಾಗದಿಂದ ಹುಡುಕಿ ಬರೆಯಿರಿ.

| | | | | | | |
|---|---|---|---|---|---|---|
| ನೆಲೆ | - | | - | | - | ತಿಂಗಳು |
| ಪ್ರಾಣಹಾನಿ | - | | - | | - | ಮ್ಯಾಗಜಿನ್ |
| ನಮ್ಮ | - | | - | | - | ಕಾರ್ಯಾಚರಣೆ |
| ಕಲ್ಲೆದೆ | - | | - | | - | ಜಿಲ್ಲೆ |

# ಕಲಿಕಾ ಕಣಜ



| ಕಲಿಕೋಪಕರಣಗಳು / ವೇದಿಕೆಗಳು | ಚಟುವಟಿಕೆಗಳು |
|---|---|
| ನೋಟು ಪುಸ್ತಕ | ಉತ್ತರಿಸಿರಿ, ಪ್ರಾಸಪದಗಳು, ಜೋಡಿಸಿ ಬರೆಯಿರಿ, ಅಕಾರಾದಿಯಾಗಿ ಬರೆಯಿರಿ, ಪರ್ಯಾಯ ಪದಗಳು, ಆಸ್ವಾದನಾ ಟಿಪ್ಪಣಿ, ವಿವರಣೆ, ಸಜಾತೀಯ ಒತ್ತಕ್ಷರ ಪದಗಳು, ಬಿಟ್ಟ ಸ್ಥಳ ತುಂಬಿಸಿರಿ, ವಿರೋಧಾರ್ಥ ಪದಗಳು, ವಾಕ್ಯ ರಚನೆ, ಅನುಭವ ಟಿಪ್ಪಣಿ, ರಜೆ ಅರ್ಜಿ, ಕತೆ ಮುಂದುವರಿಸಿರಿ, ನಾಲಿಗೆ ಸುರುಳಿ, ಉತ್ತರಿಸಿರಿ, ವಿಜಾತೀಯ ಒತ್ತಕ್ಷರ ಪದಗಳು, ಪದ ವಿಂಗಡಣೆ, ಬಹುವಚನ ಬರೆಯಿರಿ, ಪತ್ರಿಕಾ ವರದಿ, ಘೋಷಣಾ ವಾಕ್ಯ, ಪದ್ಯ ಪೂರ್ತಿಗೊಳಿಸಿರಿ, ಅಡಿಟಿಪ್ಪಣಿ, ನಾಮಪದ-ಕ್ರಿಯಾಪದ. |
| ಪಠ್ಯಪುಸ್ತಕ | ಜೋಡಿಸಿ ಬರೆಯಿರಿ, ಪರ್ಯಾಯ ಪದಗಳು, ಬಿಟ್ಟಸ್ಥಳ ತುಂಬಿಸಿರಿ, ವಿರೋಧಾರ್ಥ ಪದ, ಪದಗಳನ್ನು ವಿಂಗಡಿಸಿರಿ, ಬಹುವಚನ ಪದಗಳು, ಘೋಷಣಾ ವಾಕ್ಯ, ಪದ್ಯ ಪೂರ್ತಿಗೊಳಿಸಿರಿ, ಅಡಿಟಿಪ್ಪಣಿ. |
| ದೃಶ್ಯಶ್ರಾವ್ಯ ಮಾಧ್ಯಮ | ಸುಂಟರಗಾಳಿ (ಪದ್ಯ), ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿ ವೀಡಿಯೋ |
| ಭಿತ್ತಿಪತ್ರಿಕೆ | ರಚನೆಗಳು, ಕೊಲಾಷ್ |
| ಪೋರ್ಟ್ ಫೋಲಿಯೋ | ರಚನೆಗಳು, ಚಿತ್ರಗಳು |
| ಬಾಲಸಭೆ/ ಶಾಲಾ ಎಸೆಂಬ್ಲಿ / ಸಿ.ಪಿ.ಟಿ.ಎ. | ಪಾಠಭಾಗದಲ್ಲಿರುವ ಪದ್ಯ, ಕಥೆ, ಉತ್ತಮ ರಚನೆಗಳು |

# 4. ಸಂಸ್ಕೃತಿ ಸಂಪದ

ನಮ್ಮ ದೇಶವು ಕಲೆ ಸಂಸ್ಕೃತಿಗಳ ತವರೂರಾಗಿದೆ. ಒಂದು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಭಾಷೆ, ಸಾಹಿತ್ಯ, ಕಲೆ, ಕ್ರೀಡೆ ಎಲ್ಲವೂ ಅಗತ್ಯ. ಜನಪದ ಹಾಡು, ಕುಣಿತ, ಕಲೆಗಳಲ್ಲಿ ಸಂಸ್ಕೃತಿಯ ತಾಯಿಬೇರನ್ನು ಕಾಣಬಹುದು. ಜನಪದ ಹಾಡುಗಳಿಗೆ ಅದರದ್ದೇ ಆದ ಹಿನ್ನೆಲೆ ಇದೆ. ಬಾಯಿತಾಳ, ಕೈತಾಳ, ಲಯ, ರಾಗದಿಂದೊಡಗೂಡಿ ಹಾಡುವ ಜನಪದ ಹಾಡುಗಳು ಮನಸ್ಸಿಗೆ ಮುದ ನೀಡುತ್ತವೆ.

ಆಹಾರ ವೈವಿಧ್ಯವೂ ನಮ್ಮ ಜನಪದ ಬದುಕಿನ ಒಂದು ಭಾಗವಾಗಿದೆ. ಆದ ಕಾರಣ ಪ್ರದೇಶದಿಂದ ಪ್ರದೇಶಕ್ಕೆ ಆಹಾರ ಕ್ರಮದಲ್ಲಿ ವ್ಯತ್ಯಾಸವಿದೆ.

ನಮ್ಮಲ್ಲಿ ಹಲವು ವಿಧದ ಕಲೆಗಳಿವೆ. ಕಲಾವಿದರೂ ಇದ್ದಾರೆ. ಈ ಕಲೆಗಳಿಗೆ ವಿಶೇಷಚೇತನರ ಕೊಡುಗೆಯೂ ಗಮನಾರ್ಹವಾದುದು. ಕಲೆ, ಸಂಸ್ಕೃತಿಯ ಅಭ್ಯಾಸ ಮತ್ತು ಅಧ್ಯಯನದಿಂದ ನಮ್ಮ ಭಾವನಾತ್ಮಕ, ಬೌದ್ಧಿಕ ವಲಯವು ವಿಸ್ತಾರವಾಗುತ್ತದೆ.

**ಚಿತ್ರಗಳನ್ನು ಗುರುತಿಸಿ ಬರೆಯಿರಿ**











# ಒಳಗಣ್ಣಿಗೆ ಒಲಿದ ನಾಟ್ಯ

ಬುಸೇ ಗೌಡರದು ಮೂಲತಃ ಮಂಡ್ಯ ಸಮೀಪದ ಒಂದು ಹಳ್ಳಿ. ಅವರು ಜನ್ಮತಃ ಅಂಧರಲ್ಲ. ಮೂರು ವರ್ಷದವರೆಗೂ ಅವರು ಉಳಿದವರಂತೆಯೇ ಇದ್ದರು. ಆದರೆ ಮೂರನೇ ವರ್ಷದ ಕೊನೆಯಲ್ಲಿ ನಡೆದ ಒಂದು ಅಪಘಾತದಲ್ಲಿ ಅವರ ಎರಡೂ ಕಣ್ಣುಗಳ ದೃಷ್ಟಿಯೇ ಹೋಗಿ ಬಿಟ್ಟಿತು. ಇದು ಇಪ್ಪತ್ತೊಂಬತ್ತು ವರ್ಷಗಳ ಹಿಂದಿನ ಮಾತು. ಹಾಲುಗಲ್ಲದ ಮಗುವಿಗೆ ಕಣ್ಣೇ ಕಾಣುವುದಿಲ್ಲ ಎಂದಾಗ ಆ ಕಂದನ ತಾಯ್ತಂದೆಯರು ಕಲ್ಲೂ ಕರಗುವಂತೆ ಗೋಳಾಡಿದರು. ಎಲ್ಲಾ ಆಸ್ಪತ್ರೆಗಳನ್ನು ಸುತ್ತಿದರು. ಎಲ್ಲಾ ವೈದ್ಯರು "ಉಹುಂ' ಏನೂ ಮಾಡಲು ಸಾಧ್ಯವಿಲ್ಲ ಎಂದು ಕೈ ಚೆಲ್ಲಿದಾಗ ಅಂಧ ಮಕ್ಕಳಿಗೆ ಶಿಕ್ಷಣ ಕೊಡುವ ಬೆಂಗಳೂರಿನ ರಮಣ ಮಹರ್ಷಿ ಶಾಲೆಗೆ ತಂದುಬಿಟ್ಟರು.

ನಾಲ್ಕು ವರ್ಷಗಳ ನಂತರ ಅಂಧ ಮಕ್ಕಳಿಗೆ ಡ್ಯಾನ್ಸ್ ಕಲಿಸಲು ಅಶೋಕ್ ಕುಮಾರ್ ಎಂಬ ಉತ್ಸಾಹಿ ಶಿಕ್ಷಕರೊಬ್ಬರು ಬಂದರು. ಆ ಅಂಧ ಮಕ್ಕಳಿಗೆ ಕೋಲಾಟ ಕಲಿಸಿದರು. ಶಿಕ್ಷಕ ಅಶೋಕ್ ಕುಮಾರರವರೇ ಬೆರಗುಗೊಳ್ಳುವ ರೀತಿಯಲ್ಲಿ ಕೇವಲ ಹನ್ನೆರಡೇ ದಿನಗಳಲ್ಲಿ ಬುಸೇಗೌಡ ಮತ್ತು ಗೆಳೆಯರು ಕೋಲಾಟ ಕಲಿತು ಅದನ್ನು ರಂಗದ ಮೇಲೆ ಪ್ರದರ್ಶಿಸಿಯೂ ಬಿಟ್ಟರು. ಈ ಮಕ್ಕಳಿಗೆ ಭರತನಾಟ್ಯ ಕಲಿಸಿದರೆ ಹೇಗೆ ಎಂಬ ಐಡಿಯಾ



ಅವರಿಗೆ ಬಂದಿತು. ಅವರ ಉತ್ಸಾಹ ಅದೆಷ್ಟು ದೊಡ್ಡದಿತ್ತು ಅಂದರೆ ತಮ್ಮ ಅನಿಸಿಕೆಯನ್ನು ಎಲ್ಲಾ ಅಂಧ ವಿದ್ಯಾರ್ಥಿಗಳಿಗೂ ಹೇಳಿಯೇ ಬಿಟ್ಟರು. ಆಗ ಅಲ್ಲಿದ್ದ ಹುಡುಗರ ಪೈಕಿ ತುಂಬಾ ಚುರುಕು ಅನ್ನಿಸಿಕೊಂಡಿದ್ದ ಬುಸೇ ಗೌಡ, "ಸರ್, ಭರತನಾಟ್ಯದ ಬಗ್ಗೆ ನಮ್ಗೆ ಏನೂ ಗೊತ್ತಿಲ್ವಲ್ಲ. ಅದನ್ನು ಕಲಿಯುವುದು ಹೇಗೆ? ಪ್ರದರ್ಶಿಸೋದು ಹೇಗೆ?" ಎಂದು ಮುಗ್ಧವಾಗಿ ಕೇಳಿದ್ದರಂತೆ.

"ನಿಮಗೆ ಭರತನಾಟ್ಯ ಹೇಳಿಕೊಡುತ್ತೇನೆ" ಎಂದು ಬುಸೇ ಗೌಡರಿಗೆ ಮತ್ತು ಗೆಳೆಯರಿಗೆ ಹೇಳಿದ ಕ್ಷಣದಿಂದಲೇ ಅಶೋಕ್ ಕುಮಾರ್ ರವರಿಗೆ ಬುಸೇ ಗೌಡನು ಕೇಳಿದ ಪ್ರಶ್ನೆ ಕಾಡತೊಡಗಿತು. ಎಂಟು ವರ್ಷದವನಿದ್ದ ಬುಸೇ ಗೌಡನನ್ನೂ, ಅವನ ಜೊತೆಗಾರರನ್ನೂ ಎದುರು ನಿಲ್ಲಿಸಿಕೊಂಡು ಒಮ್ಮೆ ಕುಣಿದು ತೋರಿಸಿದರು. ಭರತನಾಟ್ಯ ಕಲಿಯುವವರಿಗೆಲ್ಲ ಪ್ರಪ್ರಥಮವಾಗಿ ಹೇಳಿಕೊಡುವ ಲಯಬದ್ಧ ತಾಳ, ಥಂ ಕಿಟಥಕ ಥಂ.. ಥಾ..ಥೈ..ಥಾ..ಥೈ..ಥಂ..ಧಿತ್ಥಂ ಥೈ ಥಾ ಥೈ ಎಂದು ಹೇಳಿ ಅದಕ್ಕೆ ತಕ್ಕಂತೆ ಮತ್ತೆ ಹೆಜ್ಜೆ ಹಾಕಿದರು. ಕುತೂಹಲದಿಂದ ಒಮ್ಮೆ ಎದುರಿಗಿದ್ದ ವಿದ್ಯಾರ್ಥಿಗಳ ಕಡೆ ನೋಡಿದರೆ, ಅಲ್ಲಿ ಬರೀ ಪ್ರಶ್ನಾರ್ಥಕ ಚಿಹ್ನೆಯ ಮುಖಭಾವವೇ ಕಾಣಿಸಿತು. "ಓಹ್! ನಾನು ಹೇಳಿದ್ದು ಇವರಿಗೆ ನಯಾ ಪೈಸೆಯಷ್ಟೂ ಅರ್ಥವಾಗಿಲ್ಲ ಎಂದು ಅವರಿಗೆ ಆಗಲೇ ಅರ್ಥವಾಗಿ ಹೋಯಿತು.



ಬೇರೆಯವರಾಗಿದ್ದರೆ ಭರತನಾಟ್ಯ ಕಲಿಸುವ ಕರ್ಮ ಯಾರಿಗೆ ಬೇಕು ಎಂದುಕೊಂಡು ಎದ್ದು ಹೋಗುತ್ತಿದ್ದರೇನೋ. ಆದರೆ ಅಶೋಕ್ ಹಾಗೆ ಮಾಡಲಿಲ್ಲ. ಬದಲಿಗೆ ಶಿಷ್ಯರನ್ನು ಪಕ್ಕ ನಿಲ್ಲಿಸಿಕೊಂಡು ಸ್ಟೆಪ್ಸ್ ಹಾಕಿದರೆ ಹೇಗೆ? ಅಂದುಕೊಂಡರು. ಹಾಗೆ ಒಂದೊಂದು ಸ್ಟೆಪ್ ಹಾಕಿದಾಗಲೂ ಪಕ್ಕದಲ್ಲೇ ನಿಂತಿರುತ್ತಿದ್ದ ಬುಸೇ

ಗೌಡನನ್ನು "ಈಗ ನನ್ನ ಕಾಲು ಮುಟ್ಟು. ಕಾಲು ಹೇಗೆ ಬಗ್ಗಿದೆ? ಮಾಂಸ ಖಂಡಗಳು ಹೇಗೆ ಹಿಗ್ಗಿವೆ ಎಂಬುದನ್ನು ಅರ್ಥ ಮಾಡಿಕೋ" ಎಂದರು. ಐದಾರು ಬಾರಿ ಈ ಪ್ರಯೋಗವಾದ ಮೇಲೆ "ಈಗ ನೀನು ಮಾಡಿ ತೋರಿಸು" ಅಂದರು.

ಆ ವೇಳೆಗೆ ಬುಸೇಗೌಡನ ಒಳಗಣ್ಣು ಭರತನಾಟ್ಯವನ್ನು ತಕ್ಕಮಟ್ಟಿಗೆ ಅರ್ಥಮಾಡಿಕೊಂಡಿತ್ತು. ಆತ ಶಿಕ್ಷಕರೇ ಬೆರಗಾಗುವಂತೆ ಹೆಜ್ಜೆ ಹಾಕಿ ತೋರಿಸಿದನು. ಆತನ ಕಾಲುಗಳ ಚಲನೆ ಮತ್ತು ವೇಗವನ್ನು ಗಮನಿಸಿದರೆ ಆತ ಅಂಧ ಎಂದು ಹೇಳಲು ಸಾಧ್ಯವೇ ಇರಲಿಲ್ಲ. ಶಿಷ್ಯನ ಈ ಕಲಿಕೆಯಿಂದ ಖುಷಿಯಾದ ಅಶೋಕ್ ಕುಮಾರ್ ಅದಕ್ಕೆ 'ಸ್ಪರ್ಶಿಸು ಮತ್ತು ಅರ್ಥಮಾಡಿಕೋ ಶೈಲಿ' ಎಂದು ನಾಮಕರಣ ಮಾಡಿದರು.

ಒಂದೊಂದು ಪಾತ್ರದ ಅಭಿನಯವೂ ಒಂದೊಂದು ಥರ. ಅಲ್ಲಿ ಯಾವುದೇ ಸಂದರ್ಭದಲ್ಲೂ ಅವನ ಪಾತ್ರಧಾರಿ ಮಾತನಾಡುವ ಬದಲು ಅವನ ಕಣ್ಣು ಮಾತನಾಡಬೇಕು. ಕೆನ್ನೆಯ ಅದುರುವಿಕೆ, ಹಣೆಯ ನಿರಿಗೆ, ಪದೇಪದೇ ಹಾರುವ ಹುಬ್ಬು ಕಥೆ ಹೇಳಬೇಕು. ಎದುರಿಗಿದ್ದ ಶಿಷ್ಯನಿಗೆ ಇದನ್ನೆಲ್ಲ ವಿವರಿಸಿ ಹೇಳಿದರು.

ಅವರ ಶ್ರಮ ವ್ಯರ್ಥವಾಗಲಿಲ್ಲ. ತುಂಬ ಶ್ರದ್ಧೆಯಿಂದ ತುಂಬ ಆಸೆಯಿಂದ ಬುಸೇಗೌಡ ಕಲಿತುಬಿಟ್ಟನು. ತಾನು ಇಡುತ್ತಿರುವ ಹೆಜ್ಜೆ ಸರಿಯಿದೆಯೆ ಎಂದು ಖಚಿತಪಡಿಸಿಕೊಳ್ಳಲು ಗಂಟೆಗಟ್ಟಲೆ ಅಭ್ಯಾಸ ಮಾಡಿದನು. ಕಡೆಗೆ ಮುಖಭಾವ ಪ್ರದರ್ಶನದಲ್ಲಿ 'ಗುರುವನ್ನೇ ಮೀರಿಸಬಲ್ಲ ಶಿಷ್ಯ' ಎಂಬ ಹೆಗ್ಗಳಿಕೆಗೂ ಪಾತ್ರನಾದನು. ಅದರೊಂದಿಗೆ ದಶಾವತಾರ ನೃತ್ಯರೂಪದಲ್ಲಿಯೂ ಪಳಗಿದನು. 1995ರಲ್ಲಿ ರಂಗಪ್ರವೇಶಿಸಿ ಕುಣಿಯಲು ಆರಂಭಿಸಿದನು. ಭರತನಾಟ್ಯವೆಂಬುದು ಆತನ ಗೆಳತಿಯಾಯಿತು, ಬಂಧುವಾಯಿತು, ಉಸಿರಾಯಿತು. ಸಾಧನೆಗೆ ಅಸಾಧ್ಯವಾದದು ಯಾವುದೂ ಇಲ್ಲ ಎಂಬ ಮಾತಿಗೆ ಬುಸೇಗೌಡನ ಬದುಕು ಸಾಕ್ಷಿಯೂ ಆಯಿತು.

***ಎ.ಆರ್. ಮಣಿಕಾಂತ್***

(ಈ ಪಾಠಭಾಗವನ್ನು ಅವರ **"ಅಮ್ಮ ಹೇಳಿದ ಎಂಟು ಸುಳ್ಳುಗಳು"** ಎಂಬ ಕೃತಿಯಿಂದ ಆಯ್ದು ಸಂಗ್ರಹಿಸಿ ನೀಡಲಾಗಿದೆ.)

ಎ.ಆರ್. ಮಣಿಕಾಂತ್ ಕನ್ನಡದ ಖ್ಯಾತ ಪತ್ರಕರ್ತರು ಹಾಗೂ ಬರಹಗಾರರು. ಪತ್ರಿಕೆಗಳಲ್ಲಿ ತಮ್ಮ ಅಂಕಣಗಳ ಮೂಲಕ ಹೆಚ್ಚು ಜನಪ್ರಿಯರು.

## ಚಟುವಟಿಕೆಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಬುಸೇಗೌಡರಿಗೆ ಕಣ್ಣು ನಷ್ಟವಾದುದು ಹೇಗೆ?
2. ಅಂಧ ಮಕ್ಕಳಿಗೆ ಡಾನ್ಸ್ ಕಲಿಸಿದ ಶಿಕ್ಷಕರ ಹೆಸರೇನು?
3 ಅಂಧ ಮಕ್ಕಳಿಗೆ ಮೊದಲು ಯಾವ ನೃತ್ಯ ಕಲಿಸಿದರು?
4. ಅಶೋಕ್ ಕುಮಾರ್ ಅವರು ಕಲಿಸಿದ ಶೈಲಿಗೆ ಏನೆಂದು ನಾಮಕರಣ ನೀಡಿದರು?
5. ಬುಸೇಗೌಡರ ಬದುಕಿಗೆ ಯಾವುದು ಸಾಕ್ಷಿಯಾಯಿತು?

### ಅಕ್ಷರಗಳನ್ನು ಕ್ರಮೀಕರಿಸಿ ಪದ ಬರೆಯಿರಿ.

- ಲ್ಲಗಲುಹಾ -
- ರಗುಗಾಬೆ -
- ತನಾಭಟ್ಯರ -
- ದಪ್ರಸುರ್ಶಿ -
- ಖವಭಾಮು -
- ವಶಾರದತಾ -
- ತ್ಯರೂಪನೃ -

### ವಿರೋಧಾರ್ಥ ಪದ ಬರೆಯಿರಿ

- ಉತ್ಸಾಹ x
- ಆಸೆ x
- ಹಿಗ್ಗು x
- ಒಳಗಣ್ಣು x
- ಶ್ರದ್ಧೆ x

## ವಿಂಗಡಿಸಿ ಬರೆಯುವ

ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯಿರಿ.

- ಕೋಲಾಟ = ................................ + ................................
- ಅರ್ಥವಾಗಿ = ................................ + ................................
- ಶಿಕ್ಷಕರೊಬ್ಬರು = ................................ + ................................
- ಕಲಿಯುವವರಿಗೆಲ್ಲ = ................................ + ................................
- ದಶಾವತಾರ = ................................ + ................................

## ಗುರುತಿಸಿ ಬರೆಯಿರಿ

ಚಿತ್ರದಲ್ಲಿ ಕೊಟ್ಟಿರುವ ಸಂಗೀತೋಪಕರಣಗಳನ್ನು ಗುರುತಿಸಿ ಬರೆಯಿರಿ.













## ಆಮಂತ್ರಣ ಪತ್ರ

**ಎ.ಯು.ಪಿ. ಶಾಲೆ ಬೇಲೂರು**

ಅಂಚೆ : ಬೇಲೂರು

ಬೇಲೂರು

12.07.2025

ಪ್ರಿಯರೇ,

ತಾ. 19.07.2025 ನೇ ಶನಿವಾರ ಅಪರಾಹ್ನ 3.00 ಗಂಟೆಗೆ ಎ.ಯು.ಪಿ. ಶಾಲೆ ಬೇಲೂರಿನಲ್ಲಿ ವಿದ್ಯಾರಂಗ ಕಲಾಸಾಹಿತ್ಯ ವೇದಿಕೆಯ ಉದ್ಘಾಟನಾ ಕಾರ್ಯಕ್ರಮ ನಡೆಯಲಿರುವುದು. ಈ ಕಾರ್ಯಕ್ರಮದಲ್ಲಿ ತಾವೆಲ್ಲರೂ ಬಂದು ಭಾಗವಹಿಸಿ ಎಲ್ಲಾ ವಿಧದ ಸಹಕಾರಗಳನ್ನು ನೀಡಿ ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಇತೀ,

ಅಧ್ಯಕ್ಷರು ಮತ್ತು ಸದಸ್ಯರು
ಪಿ.ಟಿ.ಎ. ಮತ್ತು ಎಂ.ಪಿ.ಟಿ.ಎ.

ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದ,
ಎ.ಯು.ಪಿ. ಶಾಲೆ, ಬೇಲೂರು.

**ಕಾರ್ಯಕ್ರಮಗಳು**

| | | |
|---|---|---|
| ಪ್ರಾರ್ಥನೆ | : | ಶಾಲಾ ಮಕ್ಕಳಿಂದ |
| ಸ್ವಾಗತ | : | ಶಾಲಾ ಮುಖ್ಯೋಪಾಧ್ಯಾಯರು |
| ಅಧ್ಯಕ್ಷರು | : | ಅಧ್ಯಕ್ಷರು, ರಕ್ಷಕ-ಶಿಕ್ಷಕ ಸಮಿತಿ |
| ಉದ್ಘಾಟಕರು | : | ಪಂಚಾಯತ್ ಅಧ್ಯಕ್ಷರು |
| ಶುಭಾಶಂಸನೆ | : | • ಹಿರಿಯ ಅಧ್ಯಾಪಕರು<br>• ಅಧ್ಯಕ್ಷೆ, ಎಂ.ಪಿ.ಟಿ.ಎ. |
| ಧನ್ಯವಾದ | : | ಸಂಚಾಲಕರು, ವಿದ್ಯಾರಂಗ ಸಾಹಿತ್ಯ ವೇದಿಕೆ |

(4.00 ಗಂಟೆಯಿಂದ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ)

- ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾ ಕಲೋತ್ಸವಕ್ಕೆ ಊರವರನ್ನು ಆಮಂತ್ರಿಸಲು ಆಮಂತ್ರಣ ಪತ್ರವನ್ನು ತಯಾರಿಸಿರಿ.

# ದೂರದ ಬೆಟ್ಟದ ನೀರನ್ನು ಕಟ್ಟಿ

ತಂದಾನಿ ತಾನೊ ತಾನಿ ತಂದಾನೋ ತಂದಾನಿ ತಾನಾನೋ
ತಂದಾನಿ ತಾನೊ ತಾನಿ ತಂದಾನೋ ತಂದಾನಿ ತಾನಾನೋ || ೧ ||

ದೂರದ ಬೆಟ್ಟದ ನೀರನ್ನು ಕಟ್ಟಿ
ಕೆರೆಯನ್ನು ತುಂಬ್ಯಾರೆ
ನೀರನು ಹಾಯ್ಸಿ ಉಲುಸಾಗಿ ಪೈರು
ಪಚ್ಚೆಯ ಬೆಳೆಸ್ಯಾರೆ

ಬೆಳೆದವು ಸುತ್ತಲೂ ಕಬ್ಬಿನ ತೋಟ
ಮೆರ್ದಾವೆ ನಿಂತು ವೀಳ್ಯೆಯ ತೋಟ
ಕಿಲಕಿಲ ಹಾಡ್ಯಾವೇ ಹಕ್ಕಿಯ ಕೂಟ
ಉರುಪನು ತಂದೈತೆ ಆ ನೋಟ

ಸುರಿದಾರೆ ಕಾಲಕ್ಕೆ ಮುಂಗಾರು ಮಳೆಯು
ಹರಿದಾರೆ ಹರುಷದಿ ಹೊನ್ನಿನ ಹೊಳೆಯು
ಬೆಳೆದಾವು ಬೆಡಗಿನ ಬೆಳ್ಳಿಯ ಬೆಳೆಯು
ತರುವುದು ಜನಕೆಲ್ಲ ರನ್ನದ ಕಳೆಯು

ತುಂಬಿ ತುಳುಕುವ ಕೆರೆಯನು ನೋಡಿ
ಹಿಗ್ಗಿದರೆಲ್ಲರೂ ನಲಿದಾಡಿ
ನಿರತವು ನಮ್ಮನ್ನು ಕಾಪಾಡೆಂದು
ಪೂಜೆಯ ಗೈದರು ತಾವು ಬೇಡಿ.

*(ಜನಪದ ಗೀತೆ)*



## ಚಟುವಟಿಕೆಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಕೆರೆಯನ್ನು ಹೇಗೆ ತುಂಬಿಸಿದ್ದಾರೆ?
2. ಹುರುಪನ್ನು ತರುವ ನೋಟ ಯಾವುದು?
3. ಜನರಿಗೆ ರನ್ನದ ಕಳೆಯನ್ನು ತರುವುದು ಯಾವುದು?
4. ಜನರು ಯಾವುದನ್ನು ಕಂಡು ಹಿಗ್ಗಿದರು?

### ಆರಿಸಿ ಬರೆಯಿರಿ.

ಪದ್ಯ ಭಾಗದಿಂದ ಪ್ರಾಸ ಪದಗಳನ್ನು ಆರಿಸಿ ಬರೆಯಿರಿ.

### ಗ್ರಾಮ್ಯ ಪದಗಳ ಶಿಷ್ಟ ರೂಪ ಬರೆಯಿರಿ.

ಕೆಳಗೆ ಕೊಟ್ಟಿರುವ ಪದಗಳ ಶಿಷ್ಟರೂಪ ಬರೆಯಿರಿ.

- ತುಂಬ್ಯಾರೆ -
- ಬೆಳೆಸ್ಯಾರೆ -
- ತಂದೈತೆ -
- ಮೆರ್ದಾವೆ -
- ಉರುಪು -
- ಹಾಯ್ಸಿ -
- ಉಲುಸಾಗಿ -
- ವೀಳ್ಳೆಯ -

### ವಿಂಗಡಿಸಿ ಬರೆಯಿರಿ

- ಜನಕೆಲ್ಲ -
- ಹಿಗ್ಗಿದರೆಲ್ಲರೂ -
- ಕಾಪಾಡೆಂದು -
- ನಲಿದಾಡಿ -

### ಪದ್ಯದ ಆಸ್ವಾದನಾ ಟಿಪ್ಪಣಿ ಬರೆಯಿರಿ.

### ವಾಕ್ಯ ಬರೆಯಿರಿ

ಕೆಳಗಿನ ಪಟ್ಟಿಯಿಂದ ಅರ್ಥಪೂರ್ಣ ವಾಕ್ಯ ರಚಿಸಿರಿ.

| | | |
|---|---|---|
| ಅವನು | | ಹೋದನು |
| ಗೀತ | ಶಾಲೆಗೆ | ಹೋದಳು |
| ಅವರು | | ಹೋದರು |
| ಕುದುರೆ | ಬಯಲಿಗೆ | ಹೋಯಿತು |
| ಮಂಗ | | ಏರಿದಳು |
| ಅದು | ಮರವನ್ನು | ಏರಿತು |
| ಜಾನ್ | | ಏರಿದನು |

### ಕೆಳಗಿನ ಆಶಯ ಬರುವ ಸಾಲುಗಳನ್ನು ಪದ್ಯದಿಂದ ಹುಡುಕಿ ಬರೆಯಿರಿ.

- ಸುತ್ತಲೂ ಕಬ್ಬಿನ ತೋಟ ಬೆಳೆದಿದೆ.
- ವೀಳ್ಯದೆಲೆಯ ತೋಟ ಸೊಂಪಾಗಿ ಬೆಳೆದು ನಿಂತಿದೆ.
- ಸರಿಯಾದ ಸಮಯಕ್ಕೆ ಮುಂಗಾರುಮಳೆ ಸುರಿದರೆ ಸಂಪತ್ತು ತುಂಬಿ ತುಳುಕುವುದು.

### ಆಶಯವನ್ನು ಬರೆಯಿರಿ

ಕೆಳಗೆ ನೀಡಿದ ಪದ್ಯದ ಸಾಲುಗಳ ಆಶಯವನ್ನು ಬರೆಯಿರಿ.

ದೂರದ ಬೆಟ್ಟದ ನೀರನ್ನು ಕಟ್ಟಿ
ಕೆರೆಯನ್ನು ತುಂಬ್ಯಾರೆ
ನೀರನು ಹಾಯ್ಸಿ ಉಲುಸಾಗಿ ಪೈರು
ಪಚ್ಚೆಯ ಬೆಳೆಸ್ಯಾರೆ

### ಬಾಯಿ ತಾಳ

ಪದ್ಯದಲ್ಲಿ ಬಂದ ಬಾಯಿತಾಳವನ್ನು ಗಮನಿಸಿದಿರಲ್ಲವೇ.

ಇದೇ ರೀತಿ ಬೇರೆ ಬಾಯಿತಾಳಗಳನ್ನು ಕಂಡುಹಿಡಿದು ಬರೆಯಿರಿ.

ಉದಾ : ಸುವ್ವಿ ಸುವ್ವಮ್ಮ ಲಾಲಿ ಸುವ್ವ ಲಾಲಿ....

### ಜನಪದ ಗೀತೆಗಳನ್ನು ಸಂಗ್ರಹಿಸಿ ಬರೆಯಿರಿ.

# ನೀರುಂಡೆ ಪ್ರಸಂಗ

ಇದೇನು ಜೀರುಂಡೆಯಂತೆ ಯಾವುದೋ ಹುಳ ಇರಬೇಕು ಎಂದು ನೀವು ಭಾವಿಸಿದ್ದರೆ ತಪ್ಪು. ಇದು ಅಪ್ಪಟ ದೇಶೀಯ ತಿಂಡಿ. ಬಾಯಲ್ಲಿ ನೀರೂರಿಸುವ ನೀರುಂಡೆಯ ತಾಜಾ ಪರಿಮಳವನ್ನು ನೀವು ಆಘ್ರಾಣಿಸಿದ್ದೀರಾ? ಅದರ ಸವಿಗೆ ಮಾರು ಹೋಗಿದ್ದೀರಾ? ನಿಮಗೆ ಗೊತ್ತಿಲ್ಲ? ಹಾಗಾದರೆ ಕೇಳಿ... ಗೋಬಿ ಮಂಚೂರಿ... ಮತ್ತಿನ್ನೇನೇನೋ ಐಟಂಗಳ ಲಿಸ್ಟು ನಿಮ್ಮಲ್ಲಿ ಇರಬಹುದು. ಅವುಗಳನ್ನೆಲ್ಲ ಇದರ ಎದುರು ನಿವಾಳಿಸಿ ಒಗೆಯಬೇಕು. ಅಕ್ಕಿ, ತೆಂಗಿನಕಾಯಿ ರುಚಿಗೆ ಬೇಕಾದ ಉಪ್ಪು ಕೇವಲ ಇಷ್ಟರಿಂದಲೇ ಆ ನಮ್ಮ ಅಜ್ಜಿಯಂದಿರು ಅದೆಂತಹ ಸ್ವಾದಿಷ್ಟ ಮತ್ತು ಪೌಷ್ಟಿಕ ಆಹಾರ ವಸ್ತುವನ್ನು ಸಂಯೋಜಿಸಿದ್ದರು ಎಂದು ನೆನೆದರೆ ಅಚ್ಚರಿಯೂ ಅಭಿಮಾನವೂ ಆಗುತ್ತದೆ. ಇರಲಿ, ಈ ನೀರುಂಡೆಯ ಮಹಿಮೆಯನ್ನು ನಾನು ನಿಮಗೆ ಬಣ್ಣಿಸಲೇ ಬೇಕು.

ಚೆನ್ನಾಗಿ ಬಲಿಯದ ಆದರೆ ಎಳನೀರಿನ ಹಂತವನ್ನು ದಾಟಿ ಗಟ್ಟಿಯಾದ ತೆಂಗಿನಕಾಯಿ (ಬನ್ನಂಗಾಯಿ) ಯಾವ ಯಾವುದೋ ಕಾರಣಕ್ಕೆ ಒದಗಿದರೆ ನಮ್ಮ ಅಮ್ಮನಿಗೆ, ಅಜ್ಜಿಗೆ ನೀರುಂಡೆ ಮಾಡುವ ಹಂಬಲ. ಅವರು ನೆನೆಸಿದರೆ ಸಾಕು, ಅಕ್ಕಿಯನ್ನು ನೆನೆ ಹಾಕಿದರಂತಲೇ ಲೆಕ್ಕ. ಕರೆಂಟ್ ಇಲ್ಲ ಎಂದು ಉದಾಸೀನ ಮಾಡುವ ಸ್ವಭಾವ ಅಲ್ಲ ಅವರದು. ಯಾಕೆಂದರೆ ಕರೆಂಟಿನಿಂದ ನಡೆವ ಗ್ರೈಂಡರ್ ಆಗ ಎಲ್ಲಿತ್ತು? ನೆನೆದ



ಅಕ್ಕಿಯೊಂದಿಗೆ ಹೆರೆದ ಬನ್ನಂಗಾಯಿ ಅರೆದು ಹದವಾಗಿ ಕಾಸಿ ಚಿಕ್ಕ ಚಿಕ್ಕ ಉಂಡೆಗಳನ್ನಾಗಿ ಮಾಡಿ ಒಂದಿಷ್ಟು ಹಿಟ್ಟನ್ನು ಹಾಗೆ ನೀರಿನಲ್ಲಿ ಕದಡಿ, ಆ ಉಂಡೆಗಳನ್ನು ಅದರಲ್ಲಿ ಹಾಕಿ ಹದವಾಗಿ ಬೇಯಿಸಿತೋ ನೀರುಂಡೆ ಸಿದ್ಧ. ಅದು ಹದವಾಗಿ ತಣಿದಾಗ ಬೆಲ್ಲ ಕೆರೆಸಿ ಹಾಕಿ, ಇಲ್ಲಾ ಹಾಕದೆ-ಹೇಗೆ ಬೇಕೋ ಹಾಗೆ ಮನೆ ಮಂದಿಗೆಲ್ಲ ತಿನಿಸಿ ತಾವೂ ತಿಂದು ತೃಪ್ತರಾದಾರು. ತಿನ್ನಲು ರುಚಿ ಹೊಟ್ಟೆಗೂ ತಂಪು ಎನ್ನುವುದು ನೀರುಂಡೆಯ ವಿಶೇಷ. ನಮ್ಮ ಕರಾವಳಿಯ ದೇಶೀಯ ತಿಂಡಿಗಳ ಗುಣವೇ ಹಾಗೆ. ಎಲ್ಲಾ ಸಮತೂಕದಲ್ಲಿದ್ದು ಹದವಾಗಿ ಬೆಂದ ಈ ತಿಂಡಿಗಳನ್ನು ಹದ ಹಾಳಿತದಲ್ಲಿ ಸೇವಿಸಿದರೆ ಮನಸ್ಸಿಗೂ ತೃಪ್ತಿ, ದೇಹಕ್ಕೂ ಹಿತ. ಮಸಾಲೆ ಪದಾರ್ಥಗಳ ಅಬ್ಬರವಿಲ್ಲ, ನಮ್ಮ ಕರಾವಳಿ ಜನರಂತೆಯೇ ಎಂದು ಹೇಳಿದರೆ ತಪ್ಪಲ್ಲ.

ನೀರುಂಡೆಯಂತಹ ತಿಂಡಿಗಳು ಅಮ್ಮನ ತಲೆಮಾರಿನೊಂದಿಗೆ ಮರೆಯಾಗಿ ಹೋಗಿವೆಯೇನೋ ಎಂದು ನಾನು ಕಳವಳ ಪಡುತ್ತಿದ್ದರೆ, ನಮ್ಮ ಸಣ್ಣಕ್ಕ ನೋಡಿ ಮೊನ್ನೆ ಪಾಡ್ಯದ ತಂಬಿಲದ ನಿಮಿತ್ತ ಸಿಕ್ಕಿದ ಬನ್ನಂಗಾಯಿಗಳನ್ನು ನೋಡಿದಾಗ ಆಕೆಗೆ ನೀರುಂಡೆಯ ನೆನಪಾಯಿತು. ನೆನಪಾಯಿತು ಎಂದರೆ ಅಕ್ಕಿ ನೀರಿಗೆ ಬಿದ್ದಾಯಿತು. ಮಕ್ಕಳು ಶಾಲೆ ಬಿಟ್ಟು ಬರುವಾಗ ನೀರುಂಡೆ ರೆಡಿಯಾಗಬೇಕೆಂದು ಉತ್ಸಾಹದಿಂದ ಮಾಡ ಹೊರಟಿದ್ದಾಳೆ. ಉಂಡೆ ಮಾಡುವಾಗ ಹಿಟ್ಟಿಗೆ ಬಾಯಿ ಹಾಕಬಂದ ಬೆಕ್ಕು ಮತ್ತದರ ಪರಿವಾರವನ್ನು ಗದರಿಸುತ್ತಿದ್ದಾಳೆ. “ತಾಳಿ, ಬೆಂದ ಮೇಲೆ ನಿಮಗೂ ಕೊಡುವ” ಎಂದು ಭರವಸೆಯನ್ನು ನೀಡುತ್ತಿದ್ದಾಳೆ.

***ಡಾ. ಯು. ಮಹೇಶ್ವರಿ***



ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಸುಧೀರ್ಘ ಕಾಲ ಕನ್ನಡ ಪ್ರಾಧ್ಯಾಪಿಕೆಯಾಗಿದ್ದು ನಿವೃತ್ತರಾಗಿರುವ ಡಾ. ಯು. ಮಹೇಶ್ವರಿಯವರು ತಮ್ಮ ಅಧ್ಯಾಪನ ಮತ್ತು ನಿರಂತರವಾದ ಸಾಹಿತ್ಯ ಚಟುವಟಿಕೆಗಳಿಂದ ಪ್ರಸಿದ್ಧರಾಗಿರುವರು. ಮುಗಿಲ ಹಕ್ಕಿ (ಕವನ ಸಂಕಲನ), ಮಾನುಷಿಯ ಓದು (ಸಂಶೋಧನೆ), ಮಧುರವೇ ಕಾರಣ ಮತ್ತು ಶಬ್ದಸೂರೆ ಇವುಗಳು ಇವರ ಪ್ರಧಾನ ಕೃತಿಗಳಾಗಿವೆ. ಇವರ ಹುಟ್ಟೂರು ಕಾಸರಗೋಡಿನ ಬೇಳ ಗ್ರಾಮದ ಉಳ್ಳೋಡಿ.

## ಚಟುವಟಿಕೆಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ನೀರುಂಡೆಯನ್ನು ತಯಾರಿಸಲು ಬೇಕಾದ ವಸ್ತುಗಳು ಯಾವುವು?
2. ಸಣ್ಣಕ್ಕನಿಗೆ ನೀರುಂಡೆ ತಯಾರಿಸುವ ಹಂಬಲ ಉಂಟಾದುದು ಯಾವಾಗ?
3. ನೀರುಂಡೆಯನ್ನು ತಯಾರಿಸುವುದು ಹೇಗೆ?
4. ಲೇಖಕಿಯು ನೀರುಂಡೆಯ ಮಹತ್ವವನ್ನು ಹೇಗೆ ವಿವರಿಸಿದ್ದಾರೆ?

### ಪದಗಳಿಗೆ ಉರುಟು ಹಾಕಿರಿ.

ಕೆಳಗೆ ಕೊಟ್ಟಿರುವ ಪದಗಳನ್ನು ಪಾಠಪುಸ್ತಕದಲ್ಲಿ ಗುರುತಿಸಿ ಉರುಟು ಹಾಕಿರಿ.

| | | | |
|---|---|---|---|
| ಆಘ್ರಾಣಿಸು | ಸ್ವಾದಿಷ್ಟ | ಸಂಯೋಜಿಸಿ | ಹಂಬಲ |
| ತೃಪ್ತರಾಗು | ಹಿತ | ಪರಿವಾರ | ಭರವಸೆ |

### ಪಾಠಭಾಗದಲ್ಲಿ ಬಂದಿರುವ ಆಂಗ್ಲಭಾಷಾ ಪದಗಳನ್ನು ಪಟ್ಟಿ ಮಾಡಿರಿ.

### ವಾಕ್ಯ ರಚಿಸಿರಿ

ಕೆಳಗೆ ನೀಡಿರುವ ಪದಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸಿರಿ.

- ಹಂಬಲ -
- ಉತ್ಸಾಹ -
- ಪರಿವಾರ -
- ಭರವಸೆ -

## ಒಗಟು ಬರೆಯಿರಿ

ಕೆಳಗೆ ಕೊಟ್ಟಿರುವ ತಿಂಡಿಗಳಿಗೆ ಸಂಬಂಧಿಸಿದ ಒಗಟುಗಳನ್ನು ಬರೆಯಿರಿ.

- ಚಕ್ಕುಲಿ
- ಸೇಮಿಗೆ
- ಕಡುಬು
- ದೋಸೆ

## ಪಟ್ಟಿಯಲ್ಲಿ ಅಡಗಿರುವ ತಿಂಡಿಗಳನ್ನು ಪಟ್ಟಿ ಮಾಡಿರಿ.

| | | | | | |
|---|---|---|---|---|---|
| ವ | ಇ | ಡ್ಲಿ | ಪೂ | ರಿ | ಲು |
| ಡೆ | ಚ | ಗೆ | ದೋ | ಸೆ | ಕ |
| ರೊ | ಟ್ಟಿ | ಪಾ | ಲೆ | ಪು | ಡು |
| ಕೊ | ಮಿ | ಸಾ | ತಿ | ಟ್ಟು | ಬು |
| ಸೇ | ಮ | ಗೆ | ಪ | ತ್ರೊ | ಡೆ |

## ನಿಮಗಿಷ್ಟವಾದ ಒಂದು ತಿಂಡಿ ತಯಾರಿ ವಿಧಾನವನ್ನು ಬರೆಯಿರಿ.

## ಕ್ರಮೀಕರಿಸುವ

ನೀಡಿರುವ ವಾಕ್ಯಗಳ ಪದಗಳನ್ನು ಕ್ರಮೀಕರಿಸಿ ಸರಿಯಾದ ವಾಕ್ಯ ರಚಿಸಿರಿ.

- ಜೀರುಂಡೆಯಂತೆ / ಇದೇನು / ಯಾವುದೋ / ಇರಬೇಕು / ಹುಳ
- ಮಹಿಮೆಯನ್ನು / ನಾನು / ನೀರುಂಡೆಯ / ನಿಮಗೆ / ಈ / ಬಣ್ಣಿಸಲೇ ಬೇಕು
- ರುಚಿ / ತಂಪು / ಹೊಟ್ಟೆಗೂ / ತಿನ್ನಲು / ವಿಶೇಷ / ನೀರುಂಡೆಯ / ಎನ್ನುವುದು
- ನಿವಾಳಿಸಿ / ಅವುಗಳನ್ನೆಲ್ಲ / ಒಗೆಯಬೇಕು / ಇದರ / ಎದುರು

# ಕಲಿಕಾ ಕಣಜ



| ಕಲಿಕೋಪಕರಣಗಳು / ವೇದಿಕೆಗಳು | ಚಟುವಟಿಕೆಗಳು |
|---|---|
| ನೋಟು ಪುಸ್ತಕ | ಪ್ರಶ್ನೋತ್ತರ, ಕ್ರಮೀಕರಿಸಿರಿ, ವಿರೋಧಾರ್ಥ ಪದ, ಆಮಂತ್ರಣ ಪತ್ರ, ಪ್ರಾಸಪದ, ಶಿಷ್ಟರೂಪ, ವಿಂಗಡಿಸಿರಿ, ಹುಡುಕಿ ಬರೆಯಿರಿ, ಉತ್ತರಿಸಿರಿ, ಉರುಟು ಹಾಕಿರಿ, ಆಂಗ್ಲಭಾಷಾ ಪದ, ವಾಕ್ಯ ರಚಿಸಿರಿ, ಒಗಟು, ಅಡಗಿ ಕುಳಿತವರು ಯಾರು |
| ಪಠ್ಯಪುಸ್ತಕ | ಪ್ರವೇಶ ಚಟುವಟಿಕೆ, ಕ್ರಮೀಕರಿಸಿರಿ, ವಿರೋಧಾರ್ಥ ಪದ, ವಿಂಗಡಿಸಿ ಬರೆಯಿರಿ, ಶಿಷ್ಟರೂಪ, ವಿಂಗಡಿಸಿ ಬರೆಯಿರಿ, ಅರ್ಥ ಬರೆಯಿರಿ, ಉರುಟು ಹಾಕಿರಿ, ಅಡಗಿ ಕುಳಿತವರು ಯಾರು |
| ದೃಶ್ಯಶ್ರಾವ್ಯ ಮಾಧ್ಯಮ | ದೂರದ ಬೆಟ್ಟದ ನೀರನ್ನು ಕಟ್ಟಿ (ಪದ್ಯ), ಕಲೆಗಳಿಗೆ ಸಂಬಂಧಿಸಿ ವೀಡಿಯೋ |
| ಭಿತ್ತಿಪತ್ರಿಕೆ | ರಚನೆಗಳು |
| ಪೋರ್ಟ್ ಫೋಲಿಯೋ | ರಚನೆಗಳು, ಚಿತ್ರಗಳು |
| ಬಾಲಸಭೆ/ ಶಾಲಾ ಎಸೆಂಬ್ಲಿ/ ಸಿ.ಪಿ.ಟಿ.ಎ. | ಪಾಠಭಾಗದಲ್ಲಿರುವ ಪದ್ಯ, ಕಥೆ |

## ಪದಕೋಶ

### ಘಟಕ 1 - ನಿಸರ್ಗದ ಒಡಲು

| | | |
|---|---|---|
| ಅಳಲು | - | ದುಃಖ |
| ಆಂದೋಲನ | - | ಕ್ರಾಂತಿ, ಚಳುವಳಿ |
| ಆಕ್ರಮಣ | - | ದಾಳಿ |
| ಆಗಂತುಕ | - | ಅಪರಿಚಿತ |
| ಆಸರೆ | - | ಆಶ್ರಯ |
| ಉಸ್ತುವಾರಿ | - | ಮೇಲ್ವಿಚಾರಣೆ |
| ಎಳೆಬಿಸಿಲು | - | ಮುಂಜಾನೆ ಮತ್ತು ಸಂಜೆಯ ಬಿಸಿಲು |
| ಒಡ್ಡೋಲಗ | - | ದರ್ಬಾರು , ಸಭೆ |
| ಒತ್ತೆಯಾಳು | - | ಸೆರೆಯಾಳು |
| ಒಪ್ಪಂದ | - | ಒಪ್ಪಿಗೆ , ಕರಾರು |
| ಕಂಬನಿ | - | ಕಣ್ಣೀರು |
| ಕತ್ತು | - | ಕುತ್ತಿಗೆ, ಕೊರಳು |
| ಕರುಣೆ | - | ದಯೆ |
| ಕುಲ | - | ವಂಶ |
| ಖೇದ | - | ದುಃಖ |
| ಗಲೀಜು | - | ಹೊಲಸು, ಕೊಳಕು |
| ಗಸ್ತು | - | ಪಹರೆ |
| ಗುಟುಕು | - | ಒಂದು ಸಲ ಕುಡಿಯುವಷ್ಟು |
| ಚಾಟಿ | - | ಬಾರು ಕೋಲು |
| ಚುಕ್ಕಿ | - | ನಕ್ಷತ್ರ |

| | | |
|---|---|---|
| ತಾಕೀತು | - | ಎಚ್ಚರಿಕೆ , ಕಟ್ಟಪ್ಪಣೆ |
| ದುರ್ವರ್ತನೆ | - | ಕೆಟ್ಟ ವರ್ತನೆ |
| ದೂತ | - | ಸೇವಕ, ರಾಯಭಾರಿ |
| ದಿಟ್ಟಿಸು | - | ಲಕ್ಷ್ಯವಿಟ್ಟು ನೋಡು |
| ನಾಪತ್ತೆ | - | ಕಾಣೆಯಾಗು |
| ನಾಶ | - | ಅಳಿವು , ಹಾನಿ |
| ನೆತ್ತಿ | - | ತುದಿ , ಹಣೆ |
| ಪಂಜರ | - | ಹಕ್ಕಿ , ಪ್ರಾಣಿ ಮುಂತಾದುವುಗಳನ್ನು ಇಡುವ ಗೂಡು |
| ಪುರಸ್ಕರಿಸು | - | ಗೌರವಿಸು, ಸನ್ಮಾನಿಸು |
| ಬಂಧಿಸು | - | ಸೆರೆಹಿಡಿಯು |
| ಬಾನು | - | ಆಕಾಶ |
| ಬೆನ್ನಟ್ಟು | - | ಹಿಂಬಾಲಿಸು |
| ಬೇಟೆ | - | ಶಿಕಾರಿ |
| ಭೇಟಿ | - | ಮುಖಾಮುಖಿ |
| ಮನವರಿಕೆ | - | ಮನಸ್ಸಿಗೆ ಅರಿವಾಗುವಿಕೆ |
| ಮನವಿ | - | ಬೇಡಿಕೆ, ಅರ್ಜಿ |
| ಮುಗಿಲು | - | ಮೋಡ |
| ಮೈಯೊಡ್ಡು | - | ದೇಹವನ್ನು ಒಡ್ಡು |
| ಶತ್ರು | - | ವೈರಿ |
| ಸಂಕಷ್ಟ | - | ಕಷ್ಟ |
| ಸಂಕುಲ | - | ಗುಂಪು , ಸಮೂಹ |
| ಸುಸ್ತಾಗಿ | - | ಆಯಾಸ , ಬಳಲಿಕೆ |
| ಸೋಜಿಗ | - | ವಿಸ್ಮಯ |

| | | |
|---|---|---|
| ಸೌಹಾರ್ದ | - | ಸಹೃದಯತ , ಸೌಜನ್ಯ |
| ಹೊಂಚುಹಾಕು | - | ಸಮಯ ಕಾಯು |

## ಘಟಕ 2 - ಹಸಿರು ಹೊನ್ನು

| | | |
|---|---|---|
| ಆರಾಮ | - | ವಿಶ್ರಾಂತಿ |
| ಉಂಬನು | - | ಊಟ ಮಾಡುವನು |
| ಉದಾರ | - | ಧಾರಾಳ ಮನಸು |
| ಉನಲು | - | ಉಣ್ಣಲು, ಊಟ ಮಾಡಲು |
| ಉಪದೇಶ | - | ಬೋಧನೆ, ಬುದ್ಧಿವಾದ |
| ಕಟಾವು | - | ಕೊಯ್ಲು |
| ಕಣಜ | - | ಧಾನ್ಯವನ್ನು ಶೇಖರಿಸಿಡುವ ಸ್ಥಳ |
| ಕಳೆ | - | ಪೈರಿನ ನಡುವೆ ಬೆಳೆಯುವ ಹುಲ್ಲು |
| ಕೀಳತೊಡಗು | - | ಕಿತ್ತುಹಾಕು, ತೆಗೆದು ಹಾಕು |
| ಗಂಟಿ | - | ದನಕರು, ಎತ್ತುಗಳು |
| ಗದರಿಸು | - | ಜೋರುಮಾಡು |
| ಗೆಯ್ದು | - | ಮಾಡಿ |
| ಗೈತ | - | ದುಡಿಮೆ |
| ಜವಾಬ್ದಾರಿ | - | ಹೊಣೆಗಾರಿಕೆ |
| ಜೋಡು | - | ಜತೆ |
| ಜೋಲು | - | ಇಳಿಬೀಳು, ತೂಗಾಡು |
| ತರಾವರಿ | - | ಹಲವು ಬಗೆಯ |
| ತರಾತರಿ | - | ಬೇರೆ ಬೇರೆ |
| ತಳಿ | - | ಪ್ರಬೇಧ |
| ತಂಗಳನ್ನ | - | ಹಿಂದಿನ ದಿನದ ಅನ್ನ |

| | | |
|---|---|---|
| ಪರ್ಯಾಯ | - | ಬದಲಿ |
| ಪಾತಿ | - | ಬೀಜ ಬಿತ್ತಲು ಮಾಡಿದ ಸಾಲು |
| ಪಾಯ | - | ಪಾದ, ಬುನಾದಿ |
| ಪುನಃರಪಿ | - | ಮತ್ತೊಮ್ಮೆ |
| ಫಸಲು | - | ಬೆಳೆ, ಇಳುವರಿ |
| ಬಳಗ | - | ಗುಂಪು |
| ಬಂಧು | - | ಸಂಬಂಧಿಕ |
| ಬೆರಗು | - | ವಿಸ್ಮಯ, ಆಶ್ಚರ್ಯ |
| ಮೂಟೆ | - | ಚಿಕ್ಕಪೊಟ್ಟಣ |
| ವಯಸ್ಸು | - | ಪ್ರಾಯ |
| ವಿರಮಿಸದೆ | - | ವಿಶ್ರಾಂತಿಯಿಲ್ಲದೆ |
| ಸರದಾರ | - | ಒಡೆಯ |
| ಸಹಜ | - | ನೈಜ, ಸ್ವಾಭಾವಿಕ |
| ಸಾಗುವಳಿದಾರರು | - | ಬೇಸಾಯಗಾರರು, ಕೃಷಿಕರು |
| ಸಾಧನೆ | - | ಪ್ರಯತ್ನ |
| ಸುಕೃತ | - | ಪುಣ್ಯ, ಪುಣ್ಯಕಾರ್ಯ, ಭಾಗ್ಯ |
| ಸೋಮಾರಿ | - | ಆಲಸಿ, ಮೈಗಳ್ಳ |
| ಹರಟೆ | - | ಕೆಲಸಕ್ಕೆ ಬಾರದ ಮಾತಾಡುವಿಕೆ |
| ಹರ್ಷ | - | ಸಂತೋಷ |
| ಹಾಯಾಗಿ | - | ನೆಮ್ಮದಿಯಾಗಿ |
| ಹಂಗು | - | ಋಣ, ಅಗತ್ಯ |
| ಹಿರಿಯ | - | ಮೊದಲಿಗ |

## 6ಘಟಕ 3 - ಪ್ರಕೃತಿಯ ಮುನಿಸು

| | | |
|---|---|---|
| ಅಸಹಾಯಕ | - | ಸಹಾಯವಿಲ್ಲದಿರುವುದು |
| ಆಕ್ರಂದನ | - | ಗಟ್ಟಿಯಾಗಿ ಅಳುವುದು |
| ಆರೋಪ | - | ಇಲ್ಲದ್ದನ್ನು ಹೇಳುವುದು, ಆಪಾದನೆ |
| ಇಹಲೋಕ | - | ಈ ಪ್ರಪಂಚ |
| ಕಂಗೆಡು | - | ಗಾಬರಿಯಾಗು |
| ಕಕ್ಕಾಬಿಕ್ಕಿ | - | ದಿಗ್ಭ್ರಮೆ |
| ಕಣ್ಮರೆ | - | ಕಾಣದಾಗು |
| ಕರಾಳ | - | ಭೀಕರ |
| ಕಲಾವಿದ | - | ಕಲೆಗಾರ |
| ಕೊಚ್ಚೆ | - | ಕೆಸರು |
| ಖಾತರಿ | - | ಖಚಿತ |
| ಚರಿತ್ರೆ | - | ಇತಿಹಾಸ |
| ಚೀತ್ಕಾರ | - | ಆರ್ತನಾದ |
| ಛಿದ್ರ | - | ಬಿರುಕು, ನಾಶ |
| ಜಾವ | - | ಸಮಯ |
| ಪ್ರಮುಖ | - | ಮುಖ್ಯ |
| ಪರಿಸ್ಥಿತಿ | - | ಸನ್ನಿವೇಶ |
| ಪ್ರವಚನ | - | ಭವಿಷ್ಯನುಡಿ |
| ಪ್ರವಾಹ | - | ಹರಿವು |
| ಬೆಂಬತ್ತಿ | - | ಬೆನ್ನಟ್ಟಿ, ಹಿಂಬಾಲಿಸು |
| ಭರ | - | ವೇಗ, ರಭಸ |
| ಬಾರಿ | - | ಸಲ |

| | | |
|---|---|---|
| ಬೃಹತ್ | - | ಹಿರಿದಾದ |
| ಮರುಕ | - | ದಯೆ, ಕರುಣೆ, ಕನಿಕರ |
| ಮಣಿಸು | - | ಸೋಲಿಸು |
| ಮುಖಂಡ | - | ನಾಯಕ, ನೇತಾರ |
| ಮೊರೆ | - | ಬೇಡಿಕೆ, ಪ್ರಾರ್ಥನೆ |
| ಮೊರೆತ | - | ಭೋರ್ಗರೆತ |
| ತ್ಯಜಿಸು | - | ಬಿಟ್ಟುಬಿಡು |
| ದಂಡ | - | ವ್ಯರ್ಥ |
| ದಟ್ಟವಾದ | - | ನಿಬಿಡವಾದ |
| ದ್ವೇಷಿಸು | - | ಹಗೆ ಸಾಧಿಸು |
| ಧಾರಾಕಾರ | - | ಸತತವಾಗಿ |
| ಧೂಳಿ | - | ಧೂಳು |
| ರಮಣೀಯ | - | ಸುಂದರವಾದ |
| ರೌದ್ರ | - | ಭೀತಿ ಹುಟ್ಟಿಸುವ |
| ಲಾಲಸೆ | - | ಅತಿಆಸೆ |
| ವಾಸ್ತವ | - | ನೈಜ |
| ಶೇಖರ | - | ಸಂಗ್ರಹ |
| ಶೋಭಿಸು | - | ನಳನಳಿಸು, ಕಂಗೊಳಿಸು |
| ಸಂಗಮ | - | ಕೂಡುವುದು |
| ಸಂತ್ರಸ್ತ | - | ತೊಂದರೆಗೊಳಗಾದವ |
| ಸಂಪರ್ಕ | - | ಸಂಬಂಧ |
| ಸುಂಟರಗಾಳಿ | - | ಸುಳಿಗಾಳಿ |
| ಸದೃಶ | - | ಹೋಲುವಂತಹ, ಸಮಾನವಾದ |

| | | |
|---|---|---|
| ಸೊಬಗು | - | ಚೆಲುವು |
| ಸೋರು | - | ಜಿನುಗು, ತೊಟ್ಟಿಕ್ಕು |
| ಹಾನಿ | - | ನಾಶ |
| ಹೆಣ | - | ಶವ |

## ಘಟಕ 4 - ಸಂಸ್ಕೃತಿ ಸಂಪದ

| | | |
|---|---|---|
| ಅಘ್ರಾಣಿಸು | - | ವಾಸನೆ ಹಿಡಿ |
| ಅಚ್ಚರಿ | - | ಆಶ್ಚರ್ಯ |
| ಅಪಘಾತ | - | ಆಕಸ್ಮಿಕ ಘಟನೆ |
| ಅಪ್ಪಟ | - | ತಾಜಾ |
| ಅಭಿಮಾನ | - | ಹೆಮ್ಮೆ |
| ಅಂಧ | - | ಕುರುಡ |
| ಉರುಪು | - | ಉತ್ಸಾಹ |
| ಉಲುಸಾಗಿ | - | ಹೆಚ್ಚಳ, ಸಮೃದ್ಧಿ |
| ಕದಡು | - | ಕಲಸು |
| ಕಳವಳ | - | ತಳಮಳ |
| ಕುತೂಹಲ | - | ತವಕ, ಕೌತುಕ |
| ಕೂಟ | - | ರಾಶಿ, ಗುಂಪು |
| ಗೋಳಾಡು | - | ಸಂಕಟಪಡು |
| ತಲೆಮಾರು | - | ತಲಾಂತರ, ಪೀಳಿಗೆ |
| ತಾಜಾ | - | ಹೊಚ್ಚ ಹೊಸದಾದ |
| ತಾಳು | - | ಸುಮ್ಮನಿರಿ, ಸಮಾಧಾನ ಮಾಡಿಕೊಳ್ಳಿ |
| ನಾಮಕರಣ | - | ಹೆಸರಿಡುವುದು |

| | | |
|---|---|---|
| ನಿರತ | - | ಅಸಕ್ತ, ತೊಡಗಿದ, ತಲ್ಲೀನ |
| ನಿವಾಳಿಸಿ | - | ನಿವಾರಿಸಿ, ದೃಷ್ಟಿದೋಷವನ್ನು ತೆಗೆ |
| ಪರಿವಾರ | - | ಕುಟುಂಬ |
| ಬಣ್ಣಿಸು | - | ವರ್ಣಿಸು |
| ಬಲಿಯದ | - | ಎಳತಾದ |
| ಬೆಡಗು | - | ಸೊಬಗು |
| ಬೆರಗಾಗು | - | ಆಶ್ಚರ್ಯಪಡು |
| ಮರೆಯಾಗು | - | ಕಾಣೆಯಾಗು |
| ಮಾರು ಹೋಗು | - | ಮರುಳಾಗು, ಮೋಹಗೊಳ್ಳು |
| ಮೆರೆದಾವು | - | ಹೊಳೆದಾವು |
| ಮುಗ್ಧ | - | ನಿಷ್ಕಳಂಕ |
| ಮುಂಗಾರು ಮಳೆ | - | ಮಳೆಗಾಲದ ಮೊದಲರ್ಧ, ನೈಋತ್ಯ ಮಾರುತ ತರುವ ಮಳೆ |
| ರನ್ನ | - | ರತ್ನ |
| ಸ್ಪರ್ಶಿಸು | - | ಮುಟ್ಟಿ ನೋಡು |
| ಹರುಷ | - | ಸಂತೋಷ |
| ಹಾಯಿಸು | - | ದಾಟಿಸು, ಹರಿಸು |
| ಹಾಳಿತ | - | ಸರಿಯಾದ ಪ್ರಮಾಣ |
| ಹುರುಪು | - | ಉತ್ಸಾಹ |
| ಹಂಬಲ | - | ತೀವ್ರವಾದ ಆಸೆ |
| ಹೆಗ್ಗಳಿಕೆ | - | ಹಿರಿಮೆ, ಶ್ರೇಷ್ಠತೆ |

# ಅಕ್ಷರ ಮಾಲೆ

| | | | | | | |
|---|---|---|---|---|---|---|
| ಅ | ಆ | ಇ | ಈ | ಉ | ಊ | ಋ |

| | | | | | | | |
|---|---|---|---|---|---|---|---|
| ಎ | ಏ | ಐ | ಒ | ಓ | ಔ | ಅಂ | ಅಃ |

| | | | | |
|---|---|---|---|---|
| ಕ | ಖ | ಗ | ಘ | ಙ |
| ಚ | ಛ | ಜ | ಝ | ಞ |
| ಟ | ಠ | ಡ | ಢ | ಣ |
| ತ | ಥ | ದ | ಧ | ನ |
| ಪ | ಫ | ಬ | ಭ | ಮ |

| | | | | |
|---|---|---|---|---|
| ಯ | ರ | ಲ | ವ | ಶ |
| ಷ | ಸ | ಹ | ಳ | |

# ಟಿಪ್ಪಣಿ

# ಟಿಪ್ಪಣಿ

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in